# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 02 ಸಂಚಿಕೆ – 82 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಚಿತ್ರದುರ್ಗ | ದಿನಾಂಕ: 14–10–2024 ಸೋಮವಾರ | ಪುಟ: 4 | ಬೆಲೆ : ರೂ.2–00
Volume - 02 Issue - 82 | RNI No: KARKAN/2023/88462 | Chitradurga | Date: 14-10-2024 Monday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಶರಣಸಂಸ್ಕೃತಿ ಉತ್ಸವ: ಶೂನ್ಯಪೀಠಾರೋಹಣ 2


ಗ್ರಾಮ ದೇವರು ಅನುಗ್ರಹದಿಂದ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ: ಟಿ.ರಘುಮೂರ್ತಿ 3

ಶರಣಸಂಸ್ಕೃತಿ ಉತ್ಸವ: ಬಿಚ್ಚು ಭರಮಣ್ಣ ನಾಯಕ ವಂಶಸ್ಥರಿಂದ ಭಕ್ತಿ ಸಮರ್ಪಣೆ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್



ಚಳ್ಳಕೆರೆ ನಗರದ ವಾಸವಿ ಮಹಲ್‌ನ ಕನಿಕಾಪರಮೇಶ್ವರಿ ದೇವಸ್ಥಾನದಲ್ಲಿ ದಸರಾ ಹಿನ್ನೆಲೆ ಚಾಮುಂಡೇಶ್ವರಿ ವಿಶೇಷ ಅಲಂಕಾರವನ್ನು ದೇವಿಗೆ ಮಾಡಲಾಗಿತ್ತು.

### ಹೊಸದುರ್ಗ: ವೈಭವವಾಗಿ ಜರುಗಿದ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ರಾಜ ಬೀದಿ ಉತ್ಸವ




» **ಹೊಸದುರ್ಗ**

ಪಟ್ಟಣದ ಶ್ರೀ ದುರ್ಗಾ ಸೇವಾ ಸಮಿತಿಯ ವತಿಯಿಂದ ಪಟ್ಟಣದ ಶ್ರೀ ವಿನಾಯಕ ರಂಗಮಂದಿರದ ಶ್ರೀ ದುರ್ಗಾದೇವಿ ಮಂಟಪದಲ್ಲಿ ಎಳನೇ ವರ್ಷದ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಶರನ್ನವರಾತ್ರಿ ದಸರಾ ಮಹೋತ್ಸವಕ್ಕೆ ಶನಿವಾರ ಸಂಜೆ ದೇವಿಯ ರಾಜಬೀದಿ ಉತ್ಸವ ಮತ್ತು ವಿಸರ್ಜನೆಯೊಂದಿಗೆ ನಾಂದಿ ಹಾಡಲಾಯಿತು. ಅ.3 ರಿಂದ ಅ.12 ರವರೆಗೆ ಒಟ್ಟು 9 ದಿನಗಳ ಕಾಲ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಪ್ರತಿಷ್ಠಾಪನೆ ಪ್ರತಿನಿತ್ಯ ಬೆಳಿಗ್ಗೆ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರಿಗೆ ಅಭಿಷೇಕ ಪೂಜಾದಿಗಳು,ಹಾಗೂ ಸ್ಥಳಿಯ ಭಜನಾ ಮಂಡಳಿಯವರಿಂದ ಭಜನೆ ಕಾರ್ಯಕ್ರಮ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ, ಪ್ರತಿ ದಿನ ಸಂಜೆ ಹೆಸರಾಂತ ಕಲಾವಿದರಿಂದ ವಿವಿಧಸಾಂಸ್ಕೃತಿ ಕಾರ್ಯಕ್ರಮಗಳಾದ ಜಾನಪದ ನೃತ್ಯ ಮೇಳ,ನೃತ್ಯೋತ್ಸವ,ಸುಗಮ ಸಂಗೀತ,ಮಧುಮಗ–ತ್ರಿ ನಗೆ ಕಿರು ನಾಟಕ ಇನ್ನೂ ಇತರೆ ಸಂಸ್ಕೃತಿಕ ಕಾರ್ಯಕ್ರ ಮಗಳು ಜರುಗಿದವುದುರ್ಗಾಷ್ಟಮಿಯಂದು ಶ್ರೀಮ ನವ ಚಂಡಿಕಾ ಹೋಮ,ಕುಮಾರಿ ಪೂಜೆ,ಪೂರ್ಣಾಹುತಿ,ಮಹಾಮಂಗಳಾರತಿ,ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಗಳು ನಡೆದವು ಅ.12 ರ ಶನಿವಾರ ವಿಜಯ ದಶಮಿಯಂದು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ರಾಜಬೀದಿ ಉತ್ಸವವನ್ನ ಸಂಜೆ ಪ್ರಾರಂಭಿಸಿ ನಂತರ ರಾತ್ರಿ ಮಠದ ಹೊಂಡದಲ್ಲಿ ವಿಸರ್ಜನೆ ಮಾಡಲಾಯಿತು.ದೇವಿಯ ರಾಜಬೀದಿ ಉತ್ಸವದ ದಿವಸ ಊರಿನ ಎಲ್ಲಾ ದೇವರುಗಳ ಉತ್ಸವವಿದ್ದು ಇಲ್ಲಿನ ಎಲ್ಲಾ ಬೀದಿಗಳ ಅಂಗಡಿ,ಮನೆ ಅವರಣವನ್ನು ತಳಿರು ತೋರಣಗಳಿಂದ ಶೃಂಗರಿಸಿ ಉತ್ಸವದಲ್ಲಿ ಭಾಗವಹಿಸಿ ವಿಜಯದಶಮಿ ಹಬ್ಬಕ್ಕೆ ಮೆರಗು ನೀಡಲಾಗಿತ್ತು.ಸಮಿತಿಯ ಗೌರವಾಧ್ಯಕ್ಷ ಭರತ್‌ಪಾಟೀಲ್, ಅಧ್ಯಕ್ಷ ಟಿ.ಮಂಜುನಾಥ್, ಪಾಂಡುರಂಗರಾಯ್ಕರ್ ಉಪಾಧ್ಯಕ್ಷ ಡಿ.ಹೆಚ್.ನಾಗರಾಜ್,ಕಾಯದರ್ಶಿ ಎಸ್. ಕೆ.ಮಂಜುನಾಥ್, ಸಹಕಾರ್ಯದರ್ಶಿ ಜಿತೇಂದ್ರ, ಸದಸ್ಯರುಗಳಾದ ಅನಿಲ್,ಪ್ರದೀಪ್, ಪ್ರವೀಣ್, ಜಯರಾಜ್, ಪ್ರಸನ್ನಕುಮಾರ್,ರಾಜಣ್ಣ ಹಾಗೂ ಅಪಾರ ಸಂಖ್ಯೆಯ ಭಕ್ತರು ಭಾಗಿಯಾಗಿದ್ದರು.

# ರಾಜ ಮದಕರಿ ಜಾತ್ಯಾತೀತ ನಾಯಕ

» **ಚಿತ್ರದುರ್ಗ**

ರಾಜವೀರ ಮದಕರಿ ನಾಯಕ ಯಾವೊಂದು ಜಾತಿಗೆ ಸೀಮಿತವಾಗದೆ, ಜಾತ್ಯಾತೀತ ನಾಯಕನಾಗಿದ್ದ ಎಂದು ವಾಲ್ಮೀಕಿ ಗುರಪೀಠದ ಶ್ರೀ ವಾಲ್ಮಿಕಿ ಪ್ರಸನ್ನಾನಂದ ಶ್ರೀಗಳು ತಿಳಿಸಿದರು.



ಚಿತ್ರದುರ್ಗ ನಗರದ ಮೆಜೆಸ್ಟಿಕ್ ವೃತ್ತದಲ್ಲಿನ ರಾಜ ವೀರ ಮದಕರಿನಾಯಕಮ ಪ್ರತಿಮೆ ಬಳಿ ಭಾನುವಾರ ನಡೆದ ರಾಜ ವೀರ ಮದಕರಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮದಕರಿ ಪ್ರತಿಮೆ ಪುಷ್ಪಾರ್ಚಣೆ ಸಲ್ಲಿಸಿ ಮಾತನಾಡಿದ ಶ್ರೀಗಳು, ನಾಡಿನಾದ್ಯಂತ ಇಂದು ಚಿತ್ರದುರ್ಗವನ್ನು ಆಳಿದ ನಾಡದೊರೆ ರಾಜ ವೀರ ಮದಕರಿನಾಯಕಯ ಜಂಯತೋತ್ಸವವನ್ನು ಅತಂತ್ಯ ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಗುತ್ತಿದೆ. ಬಹುತೇಕ ದಕ್ಷಿಣ ಭಾರತದಲ್ಲಿ ಮೊಗಲರ ಧಾಳಿಯನ್ನು ಸಮರ್ಥವಾಗಿ ಎದುರಿಸಿದ ತನ್ನ ಸುತ್ತಾ–ಮುತ್ತಲ್ಲಿನ ವೈರಿಗಳನ್ನು ಹಿಮೆಟ್ಟಿಸಿ ಚಿತ್ರದುರ್ಗವನ್ನು ಮದಕರಿ ನಾಯಕ 25 ವರ್ಷಗಳ ಆಳ್ವಿಕೆಯನ್ನು ನಡೆಸಿ ಒಬ್ಬ ಹಿರೋ ಜಾತ್ಯಾತೀತ ನಾಯಕ ಮದಕರಿ ನಾಯಕ ಈ ಸಮಯದಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡದೆ ಎಲ್ಲಾ ಜಾತಿಯವರನ್ನು ಸಮಾನಾಗಿ ಕಾಣುವುದರ ಮೂಲಕ ರಾಜ್ಯಭಾರವನ್ನು ನಡೆಸಿದ್ದಾನೆ ಎಂದರು.

ಈ ವ್ಯಕ್ತಿಯ ಜಯಂತಿಯನ್ನು ಪ್ರತಿ ವರ್ಷ ಚಿತ್ರದುರ್ಗದಲ್ಲಿ ಅದ್ದೂರಿಯಿಂದ ಆಚರಣೆ ಮಾಡಲಾಗುತ್ತಿದೆ. ಈ ವರ್ಷ ಸಾಂಕೇತಿಕವಾಗಿ ಆಚರಣೆ ಮಾಡಲಾಗುತ್ತಿದೆ. ಮುಂದಿನ ವರ್ಷ ಮದಕರಿ ನಾಯಕ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುವುದು ಈಗ ದಸರಾ ಶರಣ ಸಂಸ್ಕೃತಿ ಉತ್ಸವ ನಡೆದಿದೆ. ನಿನ್ನೆ ಅದರ ಮೆರವಣಿಗೆ ಆಗಿದೆ. ಮದಕರಿ ಜಯಂತಿಯ ಅದ್ದೂರಿ ಅಚರಣೆಯ ಬಗ್ಗೆ ತೀರ್ಮಾನ ತೆಗೆದುಕೊಂಡು ಎಲ್ಲರನ್ನು ಜೊತೆಗೂಡಿಸಿ ಆಚರಣೆ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷರಾದ ಹೆಚ್. ಜೆ.ಕೃಷ್ಣಮೂರ್ತಿ, ಮದಕರಿ ನಾಯಕ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಸಂದೀಪ್, ಜೆಡಿಎಸ್‌ನ ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಗೋಪಾಲಸ್ವಾಮಿ ನಾಯಕ್, ಬಿಜೆಪಿ ಮುಖಂಡರಾದ ಶ್ರೀಮತಿ ರತ್ನಮ್ಮ, ಸೋಮು, ಪತ್ರಕರ್ತರ ಸಂಘದ ಅಧ್ಯಕ್ಷರಾದ ದಿನೇಶ್ ಗೌಡಗೆರೆ, ಕಾಟೇಹಳ್ಳಿ ಕರಿಯಣ್ಣ, ಜಿ.ಟಿ,ರಾಜೇಶ್, ನಗರಸಭಾ ಮಾಜಿ ಸದಸ್ಯರಾದ ತಿಪ್ಪೇಸ್ವಾಮಿ, ಅಹೋಬಳ ಕಂಪನಿಯ ಅರುಣ್, ಅಜೇಯ ಮದಕರಿ, ದರ್ಶನ್, ತಿಪ್ಪೇಸ್ವಾಮಿ, ರಾಜ ಮದಕರಿ ನಾಯಕ, ಕಿರಣ್, ಶಿರುವಾಲಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಬಿಜೆಪಿ ಕಚೇರಿಯಲ್ಲಿ ಮದಕರಿನಾಯಕ ಜಯಂತಿ

» **ಚಿತ್ರದುರ್ಗ**

ಶತ್ರುಗಳನ್ನು ಸದೆಬಡಿದು ಗಂಡುಮೆಟ್ಟಿನ ನಾಡು ಐತಿಹಾಸಿಕ ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿ ಎಲ್ಲರ ಪ್ರಾಣ ಮಾನ ಕಾಪಾಡಿದ ರಾಜಾವೀರ ಮದಕರಿನಾಯಕನನ್ನು ಪ್ರತಿಯೊಬ್ಬರು ಸ್ಮರಿಸಿಕೊಳ್ಳಬೇಕು ಎಂದು ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ ಶಿವಣ್ಣ ತಿಳಿಸಿದರು.




ಚಿತ್ರದುರ್ಗ ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ನಡೆದ ರಾಜ ವೀರ ಮದಕರಿನಾಯಕರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜವೀರ ಮದಕರಿ ನಾಯಕ ವಂಶಸ್ಥರು ಇಲ್ಲಿಗೆ ಬರುವುದಕ್ಕಿಂತ ಮುಂಚೆ ಶ್ರೀಶೈಲಾದ ಬಳಿಯ ಜಡಿಕಲ್ಲು ಗುಡ್ಡದಿಂದ ಬಂದು ವಿಜಯನಗರ ರಾಜರ ಬಳಿ ಆಶ್ರಯ ಪಡೆದು ತದ ನಂತರ ಅವರಿಂದ ಚಿತ್ರದುರ್ಗ ಸೇರಿದಂತೆ ಇತರೆ ಜಿಲ್ಲೆಗಳನ್ನು ಬಳುವಳಿಯಾಗಿ ಪಡೆದು ತಮ್ಮ ರಾಜ್ಯವನ್ನು ಸ್ಥಾಪನೆ ಮಾಡಿದರು. ತದ ನಂತರ ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ಬಳಿ ಬಂದು ಆಶ್ರಯವನ್ನು ಪಡೆದರು. ತಮ್ಮ ಆಧಿಕಾರ ಅವಧಿಯಲ್ಲಿ ಉತ್ತಮವಾದ ಆಡಳಿತವನ್ನು ಜನರಿಗೆ ನೀಡಿದರು ಇದ್ದಲ್ಲದೆ ಉತ್ತಮವಾದ ನೀರಿನ ವ್ಯವಸ್ಥೆಯನ್ನು ಮಾಡುವುದರ ಮೂಲಕ ಜನರಿಗೆ ನೀರಿನ ತೊಂದರೆ ಇಲ್ಲದಂತೆ ಮಾಡಿದ್ದರು ಇದ್ದಲ್ಲದೆ ಜಿಲ್ಲೆಯಲ್ಲಿ ಉತ್ತಮವಾದ ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡುವುದರ ಮೂಲಕ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಿದರು ಅದನ್ನು ಈಗಲೂ ಸಹಾ ನೋಡಬಹುದಾಗಿದೆ ಎಂದರು.

ಒಮ್ಮೆ ಆನೆ ಮದವನ್ನು ಏರಿತ್ತು ಇದನ್ನು ಕಂಡ ಅಗಿನ ರಾಜರಾದ ಇವರು ಅದನ್ನು ಹಿಡಿದು ಪಳಗಿಸಿ ತಹ ಬದಿಗೆ ತಂದರು. ಇದನ್ನು ಕಂಡ ಶೃಂಗೇರಿಯ ಶ್ರೀಗಳು ಇವರಿಗೆ ಮದಕರಿ ಎಂದು ಬಿರುದನ್ನು ನೀಡಿದರು. ಆಗಿನಿಂದ ಇವರ ಹೆಸರಿನಲ್ಲಿ ಮದಕರಿ ಸೇರಿತು. ಇವರಿಗೆ 12 ವರ್ಷದಲ್ಲಿ ಪಟ್ಟವನ್ನು ಕಟ್ಟಲಾಯಿತು.

ಸಂಘ ಪರಿವಾರದ ಸಾಮರಸ್ಯ ಸಂಘಟಕರಾದ ವಾದಿರಾಜ್ ಜಿ ಮದಕರಿನಾಯಕ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಂಪತ್ ಕುಮಾರ್. ರಾಜ್ಯ ಕಾರ್ಯಕಾರಣಿ ಮಾಜಿ ಸದಸ್ಯರಾದ ಪಾಪೇಶ್ ನಾಯಕ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಾಳೇಕಾಯಿ ರಾಮ್‌ದಾಸ, ಸಂಪತ್ ಕುಮಾರ್. ಚಳ್ಳಕೆರೆ ಕ್ಷೇತ್ರ ಮುಖಂಡರಾದ ಕೆ ಟಿ ಕುಮಾರಸ್ವಾಮಿ ಎಸ್ಟಿ ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಕವನ. ನಿಕಟಪೂರ್ವ ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿಯಾದ ಮಂಜುನಾಥ್. ಗ್ರಾಮಾಂತರ ಮಂಡಲ ಅಧ್ಯಕ್ಷರಾದ ಕಲ್ಲೇಶಯ್ಯ ಚಿತ್ರ ನಾಯಕ ಸಂಘದ ಅಧ್ಯಕ್ಷರಾದ ಪ್ರಶಾಂತ್ ಕೂಲಿಕಾರ್ ಯುವ ಮುಖಂಡರಾದ ಸೋಮು ರೈತ ಮಾರುತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೂರಮ್ಮನಹಳ್ಳಿ ನಾಗರಾಜ್. ಬೋಸೆರಂಗಸ್ವಾಮಿ. ಎಸ್ಟಿ ಮೋರ್ಚಾ ಗ್ರಾಮಾಂತರ& ನಾಯಕನಹಟ್ಟಿ ಮಂಡಲ ಅಧ್ಯಕ್ಷರಾದ ಶಿವಪ್ರಸಾದ್ ಪಾರ್ವತಯ್ಯ. ಸೇರಿದಂತೆ ವಿವಿಧ ಹಂತದ ಪದಾಧಿಕಾರಿಗಳು ಭಾಗವಹಿಸಿದ್ದರು.

## ಗೌರಸಮುದ್ರ ಶಾಲೆ, ದೇವಸ್ಥಾನದ ಬಳಿಯ ಬಾರ್‌ಮುಚ್ಚುವಂತೆ ಪ್ರತಿಭಟನೆ



**ಚಳ್ಳಕೆರೆ:** ತಾಲ್ಲೂಕಿನ ತಳಕು ಹೋಬಳಿಯ ಗೌರಸಮುದ್ರ ಗ್ರಾಮದಲ್ಲಿ ಖಾಸಗಿ ಬಾರೊಂದು ದೇವಸ್ಥಾನ, ಶಾಲೆಯ ಬಳಿಯೇ ಇದ್ದು ಇದರಿಂದ ಸಾರ್ವಜನಿಕರಿಗೆ ಹಾಗೂ ದೇವಸ್ಥಾನಕ್ಕೆ ಬಂದುಹೋಗುವ ಭಕ್ತರಿಗೆ ತೊಂದರೆ ಉಂಟಾಗುತ್ತಿದ್ದು ಕೂಡಲೇ ಬಾರನ್ನು ಮುಚ್ಚಬೇಕೆಂದು ಒತ್ತಾಯಿಸಿ ಬಾರ್‌ಮುಂದೆ ಭಾನುವಾರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಗ್ರಾಮ ಪಂಚಾಯಿತಿ ಸದಸ್ಯ ಶಶಿಕುಮಾರ್ ನೇತೃತ್ವದಲ್ಲಿ ಪ್ರತಿಭಟನೆನಡೆದಿದ್ದು, ಈಗಾಗಲೇ ಸಂಬಂಧಪಟ್ಟ ಅಬಕಾರಿ ಇಲಾಖೆ, ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ ಲಿಖಿತಮೂಲಕ ಮನವಿ ನೀಡಿ ಪ್ರತಿನಿತ್ಯ ನೂರಾರು ಜನರು ಕುಡಿದು ರಸ್ತೆಯಲ್ಲಿ ಅವಾಚ್ಯಶಬ್ದಗಳಿಂದನಿಂದಿಸುತ್ತಾರೆ. ವಿಶೇಷವಾಗಿ ಮಹಿಳೆಯರ ಬಗ್ಗೆ ಅನಗತ್ಯವಾಗಿ, ಲಘುವಾಗಿ ಮಾತನಾಡುತ್ತಾರೆ. ಅಪಾಯಕಾರಿ ಸಂಗತಿ ಎಂದರೆ ಇತ್ತೀಚಿಗೆ ಶಾಲಾ ವಿದ್ಯಾರ್ಥಿಗಳು ಸಹ ಕಂಡುಕಾಣದಂತೆ ಬಾರ್‌ಗೆ ಹೋಗುತ್ತಿದ್ದಾರೆ ಎಂದು ಆರೋಪಿಸಿದರು.

ಸಂಜೆ ವೇಳೆಯಲ್ಲಿ ಗ್ರಾಮ ಎಲ್ಲಾ ರಸ್ತೆಗಳಲ್ಲಿ ಕುಡುಕರ ದರ್ಬಾರು ಹೆಚ್ಚಾಗುತ್ತದೆ. ಯಾರೇ ಎದುರಿಗೆ ಬರಲಿ ಅವರನ್ನು ತುಚ್ಛವಾಗಿ ಬೈಯುತ್ತಿದ್ದಾರೆ, ಯಾರಾದರೂ ಮಹಿಳೆ ಓಡಾಟ ನಡೆಸಿದರೆ ಹೀಯಾಳಿಸುತ್ತಾರೆ. ಇದರಿಂದ ಗ್ರಾಮದ ಜನರು ರೋಸಿದ್ದಾರೆ, ಗ್ರಾಮದಲ್ಲಿ ನೆಮ್ಮದಿ ಮಾಯವಾಗಿ ಅಶಾಂತಿ ವಾತಾವರಣ ಉಂಟಾಗಿದೆ ಎಂದು ಅವರು ತಮ್ಮ ಅಸಮಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯಿತಿ ಸದಸ್ಯರಾದ ಈರಣ್ಣ, ನಾಗರಾಜು, ಗ್ರಾಮಸ್ಥರಾದ ಭಾಗ್ಯಮ್ಮ, ಮಾರಕ್ಕ, ನಾಗರಾಜ, ರಾಜಶೇಖರ, ಚಂದ್ರಶೇಖರ, ಪಾಲಕ್ಕ, ಉಷಾ, ಸುಧಾ, ಗಂಗಮ್ಮ, ಗೌರಮ್ಮ, ಮುರುಳಿ, ನಾಗರಾಜು ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**ಪ್ರಮುಖ ಸುದ್ದಿ**


# ಕಬೀರಾನಂದ ಆಶ್ರಮದಲ್ಲಿ ವಿಜಯದಶಮಿ ಆಚರಣೆ

» **ಚಿತ್ರದುರ್ಗ**

ನಗರದ ಕಬೀರಾನಂದ ನಗರದಲ್ಲಿನ ಶ್ರೀ ಸದ್ಗುರು ಕಬೀರಾನಂದಸ್ವಾಮಿ ಆಶ್ರಮದಲ್ಲಿ ನವರಾತ್ರಿಯ ಅಂಗವಾಗಿ ಕಳೆದ ಅ 3 ರಿಂದ 12 ವರೆಗೆ ಶ್ರೀ ಭಗವತಿ ಬಗಳಾಂಬಿಕಾದೇವಿ ದೇವಸ್ಥಾನದಲ್ಲಿ ವಿಜಯ ದಶಮಿಯ ಸ್ಮರಣಾರ್ಥ ಶರನ್ನವರಾತ್ರಿ ಕಾರ್ಯಕ್ರಮವನ್ನು ನಡೆಸಲಾಯಿತು.







ಈ ಕಾರ್ಯಕ್ರಮವು ಶ್ರೀ ಮಠದ ಪೀಠಾಧ್ಯಕ್ಷರಾದ ಶ್ರೀ ಶಿವಲಿಂಗಾನಂದ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ನಡೆದ ಶರನ್ನವರಾತ್ರಿ ಅಂಗವಾಗಿ ದೇವಿಯ ಚರಿತೆಯನ್ನು ಗೊಲ್ಲರಹಟ್ಟಿಯ ಸಿ ಈರಣ್ಣ ಮಲ್ಲಾಪುರ ರವರು ಪಠಿಸಿದರೆ ಸಾಹಿತಿಗಳು, ಶರಣ ಸಾಹಿತ್ಯ ಪರಿಷತ್‌ನ ಕಾರ್ಯದರ್ಶಿಗಳಾದ ಹುರಳಿ ಎಂ ಬಸವರಾಜು ಚರಿತ್ರೆಯನ್ನು ಪ್ರವಾಚನ ಮಾಡಿದರು. ಅ. 7 ರಂದು ಸುಬ್ರಾಯ ತಿಮ್ಮಣ್ಣ ಭಟ್ಟರ ತಂಡದೊಂದಿಗೆ ಚಂಡಿಕಾ ಹೋಮವನ್ನು ನಡೆಸಲಾಯಿತು.ಶರನ್ನವರಾತ್ರಿಯು ಕೊನೆಯ ದಿನವಾದ ನಿನ್ನೆ ಸಂಜೆ ಶ್ರೀ ಮಠದ ಕತೃಗಳಾದ ಶ್ರೀ ಸದ್ಗುರು ಕಬೀರಾನಂದ ಮಹಾಸ್ವಾಮಿಗಳವರ 118ನೇ ವರ್ಷದ ಜಯಂತ್ಯೋತ್ಸವನ್ನು ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ನವ ದುರ್ಗೆಯವರ ಅಂಗವಾಗಿ ಆಶ್ರಮದ ಸುತ್ತಾ–ಮುತ್ತಲ್ಲಿನ 9 ಜನ ಬಾಲಕಿಯರನ್ನು ಕರೆಯಿಸಿ ಅವರಿಗೆ ಒಂದು ತಟ್ಟೆಯಲ್ಲಿ ಅಕ್ಕಿ, ಕಾಯಿ, ಬಳೆ, ಹರಿಷಿಣ, ಕುಂಕುಮ, ನೋಟು ಪುಸ್ತಕ, ಕಣ, ಕಾಣಿಕೆ, ಬಾಳೆ ಹಣ್ಣು ನೀಡಿ ಪಾದ ಪೂಜೆಯನ್ನು ಮಾಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ದೇವಿಗೆ ಸೀರೆಯನ್ನು ಉಡಿಸಿ,ಐದು ಹೆಡೆ ಸರ್ಪದ ಆಲಂಕಾರವನ್ನು ವಿವಿಧ ರೀತಿಯ ಹೂಗಳಿಂದ ಮಾಡಲಾಗಿತು.

ತದ ನಂತರ ಶ್ರೀ ಶಿವಲಿಂಗಾನಂದ ಶ್ರೀಗಳು ತೆಲೆಗೆ ಪೇಟವನ್ನು ಧರಿಸಿ ಮೈಮೇಲೆ ಸುಂದರವಾದ ವಸ್ತ್ರವನ್ನು ಧರಿಸಿ ಕೈಯಲ್ಲಿ ಕೋಲನ್ನು ಹಿಡಿದು ಆಶ್ರಮದ ಆವರಣದಲ್ಲಿ ನಿರ್ಮಾಣ ಮಾಡಲಾದ ಅಂಬುವನ್ನು ಕಡಿಯವುದರ ಮೂಲಕ ಹಾಗೂ ಬನ್ನಿ ಗಿಡವನ್ನು ಪೂಜೆ ಮಾಡುವುದರ ಮೂಲಕ ವಿಜಯದಶಮಿಯನ್ನು ಆಚರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಸದ್ಗುರು ಕಬೀರಾನಂದ ಮಹಾಸ್ವಾಮಿಗಳವರ 118ನೇ ವರ್ಷದ ಜಯಂತ್ಯೋತ್ಸವದ ಅಂಗವಾಗಿ ಅವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಇರಿಸಿ ಆಶ್ರಮದ ಸುತ್ತಾ ಮೂರು ಸುತ್ತನ್ನು ಸಂಚಾರ ಮಾಡುವುದರ ಮೂಲಕ ಆಚರಣೆ ಮಾಡಲಾಯಿತು.

ತದ ನಂತರ ಶಿವಲಿಂಗಾನಂದ ಶ್ರೀಗಳು ಭಕ್ತರಿಗೆ ದರ್ಶನಾರ್ಶಿವಾದವನ್ನು ನೀಡಿದರು.ನಂತರಆಶ್ರಮದಒಳಗಡೆಯಲ್ಲಿ ಶ್ರೀಗಳು ಕೀರಿಟ ಪೂಜೆಯನ್ನು ನೇರವೇರಿಸಿಕೊಟ್ಟರು. ಈ ಸಂದರ್ಭದಲ್ಲಿ ಆಶ್ರಮದಕಾರ್ಯದರ್ಶಿಗಳಾದಪ್ರಶಾಂತ್, ಭಕ್ತಾಧಿಗಳಾದ ಸತೀಶ್, ತಿಪ್ಪೇಸ್ವಾಮಿ, ಗಣಪತಿ ಶಾಸ್ತ್ರಿ, ಮಂಜುನಾಥ್ ಗುಪ್ತ, ನಿರಂಜನ ಮೂರ್ತಿ, ಓಂಕಾರ್, ಗೌರಣ್ಣ, ಬಸವರಾಜು ಉಪಸ್ಥಿತರಿದ್ದರು.

ಶರಣಸಂಸ್ಕೃತಿ ಉತ್ಸವ ಚಿತ್ರಾವಳಿ











# ಶರಣಸಂಸ್ಕೃತಿ ಉತ್ಸವ: ಶೂನ್ಯಪೀಠಾರೋಹಣ

## ಧರ್ಮಗುರು ಬಸವಣ್ಣನವರ ಮತ್ತು ಶೂನ್ಯ ಪೀಠದ ಪ್ರಥಮ ಅಧ್ಯಕ್ಷ ಅಲ್ಲಮಪ್ರಭುದೇವರ ಭಾವಚಿತ್ರ ಹಾಗೂ ಪ್ರಾಚೀನಹಸ್ತ ಪ್ರತಿಗಳ ಮೆರವಣಿಗೆ



» **ಚಿತ್ರದುರ್ಗ**

2024ರ ಅಕ್ಟೋಬರ್ 13ರಂದು – ಐತಿಹಾಸಿಕ ಚಿತ್ರದುರ್ಗದ ಶೂನ್ಯಪೀಠ ಪರಂಪರೆಯ ಮುರುಘಾಮಠದಲ್ಲಿ ಸಡಗರ–ಸಂಭ್ರಮ ಮೈದಳೆದು ಎಲ್ಲಿ ನೋಡಿದಲ್ಲಿ ಭಕ್ತ ಸಮೂಹವೇ ತುಂಬಿಹೋಗಿತ್ತು. ಕಳೆದ ಅಕ್ಟೋಬರ್5ನೇ ತಾರೀಖಿನಿಂದ ನಡೆದುಕೊಂಡು ಬಂದಿರುವ ಶ್ರೀ ಜಯದೇವ ಜಗದ್ಗುರುಗಳ 150ನೇ ಜಯಂತ್ಯುತ್ಸವ ಹಾಗೂ ಶರಣಸಂಸ್ಕೃತಿ ಉತ್ಸವದಲ್ಲಿಂದು ಸಂಭ್ರಮದ ವಾತಾವರಣ ಮನೆ ಮಾಡಿತ್ತು. ವೈಚಾರಿಕತೆಯಿಂದ ಗುರುತಿಸಿಕೊಂಡಿರುವ ಮುರುಘಾಮಠದ ಶೂನ್ಯಪೀಠಾರೋಹಣ ಅತ್ಯಂತ ಮಹತ್ವ ಪಡೆದುಕೊಂಡಿದೆ. ಶ್ರೀ ಜಯದೇವ ಜಗದ್ಗುರುಗಳ ಪುತ್ಥಳಿಯನ್ನು ಇಡುವುದರ ಮೂಲಕ ಶೂನ್ಯ ಪೀಠಾರೋಹಣ ಮಾಡಲಾಯಿತು. ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್.ಜೆ.ಎಂ.ವಿದ್ಯಾಪೀಠದ ಆಡಳಿತಮಂಡಳಿ ಅಧ್ಯಕ್ಷರಾದ ಶ್ರೀ ಶಿವಯೋಗಿ ಸಿ ಕಳಸದ್, ಸದಸ್ಯರಾದ ಡಾ.ಬಸವಕುಮಾರ ಸ್ವಾಮೀಜಿಗಳ ನೇತೃತ್ವದಲ್ಲಿ ಶೂನ್ಯಪೀಠಾರೋಹಣ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ನಾಡಿನ ವಿವಿಧ ಮಠಾಧೀಶರು, ಹರಗುರು ಚರಮೂರ್ತಿಗಳು, ಸಾಧಕರು, ಭಕ್ತರು, ಎಸ್.ಜೆ.ಎಂ.ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರು, ಶಾಲಾ–ಕಾಲೇಜುಗಳ ಮುಖ್ಯಸ್ಥರುಗಳು, ನೌಕರ ವರ್ಗದವರು ಹಾಗೂ ಜನ ಸಮೂಹದ ಜಯಘೋಷಣೆಗಳೊಂದಿಗೆ ಶ್ರೀಮಠದಲ್ಲಿ ಶೂನ್ಯ ಪೀಠಾರೋಹಣವನ್ನು ಸಾಕ್ಷೀಕರಿಸಿದರು. ವಿವಿಧ ಕಲಾತಂಡಗಳು ಶ್ರೀಮಠದ ರಾಜಾಂಗಣದಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದರು.

ಶ್ರೀಮಠದ ಪ್ರಾಂಗಣದಲ್ಲಿ ಧರ್ಮಗುರು ಬಸವಣ್ಣನವರ ಮತ್ತು ಅಲ್ಲಮ ಪ್ರಭುದೇವರ ಭಾವಚಿತ್ರ ಮತ್ತು ಪ್ರಾಚೀನ ಹಸ್ತ ಪ್ರತಿಗಳ ಮೆರವಣಿಗೆಗೆ ಶ್ರೀ ಜಗದ್ಗುರು ಮುರುಘರಾಜೇಂದ್ರಬೃಹನ್ಮಠಹಾಗೂಎಸ್.ಜೆ.ಎಂ.ವಿದ್ಯಾಪೀಠದ ಆಡಳಿತಮಂಡಳಿ ಅಧ್ಯಕ್ಷರಾದ ಶ್ರೀ ಶಿವಯೋಗಿ ಸಿ ಕಳಸದ್ ಚಾಲನೆ ನೀಡಿದರು.

ಮೆರವಣಿಗೆಯು ಜಾನಪದ ಕಲಾತಂಡಗಳೊಂದಿಗೆ ಶ್ರೀಮಠದ ಆವರಣದಲ್ಲಿ ವಿವಿಧ ಮಠಾಧೀಶರು, ಹರಗುರು ಚರಮೂರ್ತಿಗಳ ಹಾಗೂ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

# ಶರಣಸಂಸ್ಕೃತಿ ಉತ್ಸವ: ಜಯದೇವ ಜಂಗೀಕುಸ್ತಿ




» **ಚಿತ್ರದುರ್ಗ**

ಶ್ರೀ ಜಯದೇವ ಜಗದ್ಗುರುಗಳ 150ನೇ ಜಯಂತ್ಯುತ್ಸವ ಹಾಗೂ ಶರಣಸಂಸ್ಕೃತಿ ಉತ್ಸವ–2024ರ ಅಂಗವಾಗಿ ದಿನಾಂಕ: 13.10.2024 ರಂದು ಶ್ರೀಮುರುಘಾಮಠದಲ್ಲಿ ಶ್ರೀ ಜಗದ್ಗುರು ಜಯದೇವ ಜಂಗೀಕುಸ್ತಿ ಆಯೋಜಿಸಲಾಗಿತ್ತು.

ಈ ಕುಸ್ತಿ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯಗಳಾದ ಆಂದ್ರಪ್ರದೇಶ್, ಮಹಾರಾಷ್ಟ, ಹಾಗೂ ತಮಿಳುನಾಡು, ಕರ್ನಾಟಕದ ಮೈಸೂರು, ಬೆಳಗಾವಿ, ಹುಬ್ಬಳ್ಳಿ, ದಾರವಾಡ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳು ಸೇರಿದಂತೆ ಪುರುಷರ



ವಿಬಾಗದಲ್ಲಿ ಸುಮಾರು 70 ಜೋಡಿಗಳು, ಮಹಿಳಾ ವಿಭಾಗದಲ್ಲಿ 20 ಜೋಡಿಗಳು ಭಾಗವಹಿಸಿದ್ದವು.ತೀರ್ಪುಗಾರರಾಗಿ ಪೈಲ್ವಾನ್ ತಿಪ್ಪೇಸ್ವಾಮಿ, ಮಹೇಂದ್ರನಾಥ್, ಮರಡಿ ಪೈಲ್ವಾನ್ ತಿಪ್ಪೇಸ್ವಾಮಿ, ಅಫೀಜ್. ಮೂರ್ತಣ್ಣ ಪೈಲ್ವಾನ್ ಅಮೃತ್ ಮೈಸೂರು. ಕಾರ್ಯನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್. ಜೆ.ಎಂ.ವಿದ್ಯಾಪೀಠದ ಆಡಳಿತಮಂಡಳಿ ಅಧ್ಯಕ್ಷರಾದ ಶ್ರೀ ಶಿವಯೋಗಿ ಸಿ ಕಳಸದ, ಸದಸ್ಯರಾದ ಡಾ.ಬಸವಕುಮಾರ ಸ್ವಾಮೀಜಿಗಳು, ಶ್ರೀ ಬಸವ ಹರಳಯ್ಯ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ವಿವಿಧ ಮಠಾದೀಶರು, ಹರಗುರು ಚರಮೂರ್ತಿಗಳು ಉಪಸ್ಥಿತರಿದ್ದರು.




**ಮುರುಘ ಮಠದ ಅನುಭವ ಮಂಟಪದಲ್ಲಿ ಶರಣ ಸಂಸ್ಕೃತಿ ಉತ್ಸವ ಅಂಗವಾಗಿ ನಡೆದ ಸಾಂಸ್ಕೃತಿಕ ಸಂಭ್ರಮದಲ್ಲಿ ಖ್ಯಾತ ಹಿನ್ನಲೆ ಗಾಯಕರಾದ ಶ್ರೀ ರಾಜೇಶ್ ಕೃಷ್ಣನ್ ಮತ್ತು ತಂಡದವರು ಸಂಗೀತ ಕಾರ್ಯಕ್ರಮ ಮೂಲಕ ನೆರೆದಿದ್ದ ಪ್ರೇಕ್ಷರರನ್ನು ರಂಜಿಸಿದರು.**

**ಪ್ರಮುಖ ಸುದ್ದಿ**

# ಅನುಭವ ಮಂಟಪದಲ್ಲಿ ಶಿವಯೋಗ ಪ್ರಾತ್ಯಕ್ಷಿಕೆ

» **ಚಿತ್ರದುರ್ಗ**

ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ 150 ನೇ ಜಯಂತ್ಯುತ್ಸವ ಹಾಗೂ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ದಿ. 12–10–2024 ರ ಬೆಳಿಗ್ಗೆ 7.30 ಕ್ಕೆ ಅನುಭವ ಮಂಟಪದಲ್ಲಿ ಶಿವಯೋಗ ಪ್ರಾತ್ಯಕ್ಷಿಕೆ ವಹಿಸಿಕೊಂಡ ಶಿವಮೊಗ್ಗ ಬಸವಕೇಂದ್ರ ಹಾಗೂ ಚಿಕ್ಕಮಗಳೂರಿನ ಶ್ರೀ ಬಸವತತ್ವ ಪೀಠದ ಡಾ.ಬಸವ ಮರುಳಸಿದ್ದ ಸ್ವಾಮಿಗಳು ಮಾತನಾಡಿ ಜಯದೇವ ಜಗದ್ಗುರುಗಳು ಬಸವಾದಿ ಪ್ರಮಥರು ಪ್ರತಿಪಾದಿಸಿದಂತಹ ತ್ರಿವಿಧ ದಾಸೋಹ ಪರಿಕಲ್ಪನೆಗಳನ್ನು ಆಧುನಿಕ ಕಾಲದ ಅಗತ್ಯಕ್ಕೆ ಅನ್ವಹಿಸುವಂತೆ ನೆಡೆದುಕೊಂಡವರು. ಇಂತಹ ಜಯದೇವ ಜಗದ್ಗುರುಗಳು 150 ನೇ ಜಯಂತ್ಯುತ್ಸವವನ್ನು ವೈಭವದಿಂದ ಆಚರಿಸುತ್ತಿದ್ದೇವೆ. ಶಿವಯೋಗವನ್ನು ತಟ್ಟೆ, ವಿಭೂತಿ, ನೀರು, ಪತ್ರೆಗಳಲ್ಲದೆ ಸರಳವಾಗಿ ಶಿವಯೋಗವನ್ನು ಮಾಡುವುದುನ್ನು ತಿಳಸಿದರು. ಶಿವಯೋಗ ಮಾಡುವ ರೀತಿಯನ್ನು ಇಷ್ಟುದಿನ ಅನೇಕ ಪೂಜ್ಯರು ನಿಮಗೆ ತಿಳಿಸಿಕೊಟ್ಟಿದ್ದಾರೆ. ಬಸವಾದಿ



ಪ್ರಮಥರು ಮಹಾಮಂತ್ರವಾದ ಓಂ ನಮಃ ಶಿವಾಯ ಬಳಸಿ ಶಿವಯೋಗ ಮಾಡುವುದನ್ನು ತೋರಿಸಿಕೊಟ್ಟರು. ಬಸವಣ್ಣನವರ ಅನುಸಂಧಾನ ಮಾಡಿದಂತಹ ಆ ಮಹಾಮಂತ್ರದ ಅನುದಾನದ ಮೂಲಕವೇ ಶಿವಯೋಗ ಸಿದ್ಧಿಯನ್ನು ಪಡೆಯುವ ನಂಬಿಕೆ ನನ್ನದು ಎಂದರು. ಓಂ ನಮಃ ಶಿವಾಯ ಎನ್ನುವ ಷಡಕ್ಷರ ಮಂತ್ರವನ್ನು ಯಾವ ರೀತಿ ಅನುಸಂಧಾನ ಮಾಡಬೇಕು ಎಂಬುದನ್ನು ತಿಳಿಸಿದರು. ಪಂಚಭೂತಗಳು ಮತ್ತು ಪರತತ್ವ ಎರಡು ಸೇರಿ ಆಗಿರುವಂತಹದ್ದು ಓಂ ನಮಃ ಶಿವಾಯ. ಈ ಜಗತ್ತಿನಲ್ಲಿ ಏನೇನಿದೆ ಅದೆಲ್ಲವೂ ನನ್ನೊಳಗಿದೆ ಎನ್ನುವ ಪ್ರಜ್ಞೆಯ ಜಾಗೃತಿ ಈ ಮಹಾಮಂತ್ರ. ಪಂಚಭೂತಗಳು ಕ್ರೀಯಾ ಶೀಲವಾಗಬೇಕಾದರೆ ಪರವಸ್ತುವಿನ ಚೈತನ್ಯ ಬೇಕು. ಪರವಸ್ತುವಿನ ಸಂಕೇತವಾಗಿ ಓಂ ಆದರೆ ಪಂಚ ಭೂತಗಳ ಸಂಕೇತವಾಗಿ ನಮಃ ಶಿವಾಯ ಎಂದರು. ಓಂಕಾರವನ್ನು ಮನಸ್ಸಿನಲ್ಲಿಯೇ ಹೇಳುತ್ತಾ ಉಸಿರನ್ನು ಹೊಳಗೆ ತೆಗೆದುಕೊಳ್ಳಬೇಕು. ನಮಃ ಶಿವಾಯ ಸ್ಮರಣೆ ಮಾಡುತ್ತಾ ಉಸಿರನ್ನು ಹೊರಬಿಡಬೇಕು. ಹೀಗೆ ಇಷ್ಟಲಿಂಗವನ್ನು ಹಿಡಿದಿಟ್ಟುಕೊಳ್ಳುತ್ತಾ ಈ ಮಹಾಮಂತ್ರ ಹೇಳುವ ಮೂಲಕ ಶಿವಯೋಗ ಮಾಡಬೇಕೆಂದರು. ಇಷ್ಟಲಿಂಗವನ್ನು ಎಡಗೈಯಲ್ಲಿ ಇಟ್ಟುಕೊಂಡು ದೃಷ್ಟಿ ಇಟ್ಟು ನೋಡುತ್ತಾ ದಿನಕ್ಕೆ ಕನಿಷ್ಟ 12 ಬಾರಿಯಾದರೂ ಈ ಮಹಾಮಂತ್ರವನ್ನು ಹೇಳುತ್ತಾ ಶಿವಯೋಗ ಮಾಡಬೇಕೆಂದು ಶಿವಯೋಗದ ಪ್ರಾತ್ಯಕ್ಷಿಕೆ ತೋರಿಸಿ ಕೊಟ್ಟರು. ಸಕಲ ಜೀವಗಳ ಸಂಕಷ್ಟ ನಿವಾರಣೆಯಾಗಲು ಎಲ್ಲರ ಬದುಕಲ್ಲಿ ಸುಖ ಶಾಂತಿ ನೆಮ್ಮದಿ ನೆಲಸಲೆಂದು ಪ್ರಾರ್ಥಿಸಿ ಮಹಾ ಮಂತ್ರವನ್ನು ಅನುಸಂಧಾನ ಮಾಡುವ ಬಗೆಯನ್ನು ತುಂಬಾ ಸೊಗಸಾಗಿ ತೋರಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಜೇವರಗಿ ಬಸವಕೇಂದ್ರದ ಶ್ರೀ ಶಿವಬಸವ ಕಲ್ಲಾ ಇವರಿಗೆ ಗೌರವಸಮರ್ಪಣೆ ಮಾಡಲಾಯಿತು. ದಾವಣಗೆರೆ ವಿರಕ್ತ ಮಠದ ಡಾ. ಬಸವಪ್ರಭು ಸ್ವಾಮೀಜಿ ಹಾಗೂ ಎಸ್.ಜೆ.ಎಂ ವಿದ್ಯಾಪೀಠದ ಆಡಳಿತ ಮಂಡಳಿಯ ಸದಸ್ಯರಾದ ಬಸವಕುಮಾರ ಸ್ವಾಮೀಜಿ ಸಾನಿಧ್ಯವಹಿಸಿದ್ದರು. ಯೋಗ ಗುರು ಮತ್ತು ವೈದ್ಯ ಚನ್ನಬಸವಣ್ಣನವರು ಹಾಗೂ ಹರಗುರುಚರಮೂರ್ತಿಗಳು ಮಠದ ಸದ್ಭಕ್ತರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜಮುರಾ ಕಲಾವಿದರು ಪ್ರಾರ್ಥಿಸಿದರೆ ಡಾ. ಬಸವ ಕುಮಾರ ಸ್ವಾಮೀಜಿ ಸ್ವಾಗತಿಸಿ ಗೌರವ ಸಮರ್ಪಣೆ ಮಾಡಿದರು.

## ಫಾಸ್ಟ್ ನ್ಯೂಸ್

### ಈಶ್ವರಮ್ಮ ಶಾಲೆಗೆ ರಾಜ್ಯ ಮಟ್ಟದ ಶಿಕ್ಷಣ ಚೈತನ್ಯ ಪ್ರಶಸ್ತಿ

» **ದಾವಣಗೆರೆ**

ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ನಗರದ ಪಿ.ಜೆ.ಬಡಾವಣೆಯಲ್ಲಿರುವ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ರಾಜ್ಯ ಮಟ್ಟದ ಶಿಕ್ಷಣ ಚೈತನ್ಯ ಪ್ರಶಸ್ತಿ ಲಭಿಸಿದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನ ಮಾಡುತ್ತಿರುವ ವಿಶಿಷ್ಟ ಪ್ರತಿಭಾನ್ವಿತ ಕ್ರಿಯಾಶೀಲ ಶಿಕ್ಷಕ-ಶಿಕ್ಷಕಿಯರನ್ನು ಹೊಂದಿ ಅತ್ಯುತ್ತಮ ಶೈಕ್ಷಣಿಕ ವಾತಾವರಣ ರೂಪಿಸಿ, ಪ್ರತಿವರ್ಷ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಶೈಕ್ಷಣಿಕ ಫಲಿತಾಂಶ ಪಡೆಯುತ್ತಿರುವ ಶಿಕ್ಷಣ ಕ್ಷೇತ್ರದಲ್ಲಿ ಮಾದರಿ ಪ್ರಜೆಗಳನ್ನು ರೂಪಿಸುತ್ತಾ 'ಶಿಕ್ಷಣ ಸೇವೆಯೇ-ಸಮಾಜ ಸೇವೆ' ಎಂದು ಪರಿಗಣಿಸಿ, 'ಮೌಲ್ಯ ಶಿಕ್ಷಣ'ವನ್ನು ಪರಿಣಾಮಕಾರಿಯಾಗಿ ಬೋಧನೆಯಲ್ಲಿ ಅಳವಡಿಸಿ, ವಿಶಿಷ್ಟ ರೀತಿಯಲ್ಲಿ ಶಾಲೆಯನ್ನು ಸಮಗ್ರವಾಗಿ ಸಾಧನೆಯ ಹಾದಿಯಲ್ಲಿ ಮುನ್ನಡೆಸುತ್ತಿರುವ ಆಡಳಿತ ಮಂಡಳಿಯ ಸೇವಾ ಕಾರ್ಯವೈಖರಿ ಗುರುತಿಸಿ ಬೆಂಗಳೂರಿನ ಹೆಸರಾಂತ ಶೈಕ್ಷಣಿಕ ಸಂಘಟನೆಯಾದ ಸೂರ್ಯ ಫೌಂಡೇಷನ್ ವತಿಯಿಂದ ಪ್ರತಿವರ್ಷ ಕೊಡ ಮಾಡುವ ರಾಜ್ಯ ಮಟ್ಟದ ಶಿಕ್ಷಣ ಚೈತನ್ಯ ಪ್ರಶಸ್ತಿಯನ್ನು ನೀಡಲಾಗಿದೆ.ಬೆಂಗಳೂರಿನಲ್ಲಿ ಅ. 15 ರಂದು ನಡೆಯುವ ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಶಾಲೆಗೆ 'ಶಿಕ್ಷಣ ಚೈತನ್ಯ -2024' ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ದಾವಣಗೆರೆ ಜಿಲ್ಲೆಗೆ ಅತ್ಯುತ್ತಮ ಶಾಲೆ ಎಂದು ಗೌರವ ಲಭಿಸಿದ ಪ್ರಯುಕ್ತ ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಗುರುವೃಂದ ಮತ್ತು ಪೋಷಕರು ಅಭಿನಂದನೆ ಸಲ್ಲಿಸಿದ್ದಾರೆ.

### ಹೊಸದುರ್ಗ: ರಭಸದ ಮಳೆಗೆ ಮನೆ ಕುಸಿತ ಪ್ರಾಣಾಪಾಯದಿಂದ ಪಾರಾದ ದಂಪತಿಗಳು



» **ಹೊಸದುರ್ಗ**

ತಾಲೂಕಿನ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಹದ ಮಳೆ ಬರುತ್ತಿದ್ದು, ಶುಕ್ರವಾರ ಮತ್ತು ಶನಿವಾರ ಸಂಜೆ ಸುರಿದ ಬಿರುಸಿನ ಮಳೆನೀರ ರಭಸಕ್ಕೆ ತಾಲೂಕಿನ ನೀರಗುಂದ ಗ್ರಾಮದ ನಿವಾಸಿ ಬಂದಯ್ಯ ಬಿನ್ ಶಂಕರಪ್ಪ ಅವರ ವಾಸದ ಮನೆಗೋಡೆ ಸಂಪೂರ್ಣ ಕುಸಿದಿದೆ.ಬಂದಯ್ಯ ಜ್ಯೋತಿ ದಂಪತಿ ಆಯುಧ ಪೂಜೆ ಮಾಡಲು ಮನೆಯೊಳಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆಗ ಬಿರುಸಿನಿಂದ ಸುರಿದ ಮಳೆಗೆ ಮನೆಯ ದೊಡ್ಡಗೋಡೆ ಒಂದೇ ಸಲಕ್ಕೆ ಬಿದ್ದಿದೆ. ಮನೆಗೋಡೆ ಬಿದ್ದ ಶಬ್ಧ ಕೇಳಿ, ಗ್ರಾಮಸ್ಥರು ಏನಾಯಿತೋ ಏನೋ ಎಂಬ ಆತಂಕದಲ್ಲಿ ಸಾಕಷ್ಟು ಜನರು ಬಂದಿದ್ದಾರೆ. ಭಯಭೀತರಾದ ದಂಪತಿಗಳು ಜೀವಭಯದಲ್ಲಿ ಮನೆಯೊಳಗಿಂದ ಓಡಿ ಹೊರಗೆ ಬಂದಿದ್ದರಿಂದ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.ಇದ್ದ ಒಂದು ವಾಸದ ಮನೆ ಕಳೆದುಕೊಂಡಿರುವ ಕಡುಬಡವರಾದ ಬಂದಯ್ಯ ಅವರ ಕುಟುಂಬ ವಾಸಕ್ಕೆ ಮನೆ ಇಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮನೆಯ ಉಳಿದ ಗೋಡೆಗಳು ಸಹ ಬಿರುಕು ಬಿಟ್ಟಿದ್ದು, ಆ ಗೋಡೆಗಳು ಯಾವಾಗ ಬೀಳುತ್ತವೆಯೋ ಎಂಬ ಜೀವಭಯ ಉಂಟಾಗಿದ್ದು, ಮನೆಯೊಳಗೆ ನಿಲ್ಲಲಿಕ್ಕೂ ಆಗದಂತಾಗಿದೆ. ಇದರಿಂದ ಎಲ್ಲಿ ವಾಸಿಸಬೇಕು ಎಂಬ ಚಿಂತೆ ಕಾಡುತ್ತಿದೆ. ಹಾಗಾಗಿ ಇಂತಹ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಬಡಕುಟುಂಬಕ್ಕೆ ಸರಕಾರದಿಂದ ಸಿಗುವ ಪರಿಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಶೀಘ್ರ ಕೊಡುವ ಮೂಲಕ ನೊಂದ ಕುಟುಂಬದ ಹಿತ ಕಾಪಾಡಬೇಕು ಎಂದು ಗ್ರಾಮಸ್ಥರು ತಾಲೂಕು ಆಡಳಿತಕ್ಕೆ ಮನವಿ ಮಾಡಿದ್ದಾರೆ.

### ಶ್ರಿರಾಂಪುರದಲ್ಲಿ ಅಂಬಿನೋತ್ಸವ

» **ಹೊಸದುರ್ಗ**

ತಾಲೂಕಿನ ಶ್ರಿರಾಂಪುರದಲ್ಲಿನ ಮಾರ್ನಮಿ ಬಯಲಿನಲ್ಲಿ ಶನಿವಾರ ವಿಜಯದಶಮಿ ಪ್ರಯುಕ್ತ ಏರ್ಪಡಿಸಲಾಗಿದ್ದ ಅಂಬಿನೋತ್ಸವ, ದೇವರುಗಳ ಕೂಡು ಬೇಟಿ, ಶಸ್ತ್ರಪವಾಡ ಸೇವೆ, ಹಲಗು ಸೇವೆ, ಊಳಗ ಸೇವೆಯೊಂದಿಗೆ ಶಮೀಪೂಜಾ ಕಾರ್ಯಕ್ರಮಗಳು ಅತ್ಯಂತ ಸಂಭ್ರಮ ಸಡಗರದಿಂದ ನೆಡೆಯಿತು.ವಿವಿಧ ಗ್ರಾಮಗಳಿಂದ ಆಗಮಿಸಿದ್ದ ದೇವರುಗಳ ಸಮ್ಮುಖದಲ್ಲಿ ಕಂದಾಯ ಇಲಾಖೆಯ ಉಪ ತಹಶೀಲ್ದಾರ್ ದಿಲೀಪ್ ಬೂದಿಹಾಳಿನ ಪಾಳೇಗಾರ ಕುಮಾರಮಲ್ಲನ ರಾಜ ಮುದ್ರಿತ ಉಂಗುರವನ್ನು ಧರಿಸುವ ಮೂಲಕ ಬಾಳೆಕಂದನ್ನು ಕತ್ತರಿಸಿ ಶಮೀಪೂಜೆ ನೆರವೇರಿಸಿದರು. ನಂತರ ಭಕ್ತರು ಬನ್ನಿ ಪತ್ರೆಯನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ದಸರಾ ಮಹೋತ್ಸವವನ್ನು ಸಂಭ್ರಮಿಸಿ ನಂತರ ಆಗಮಿಸಿದ್ದ ಎಲ್ಲಾ ದೇವರುಗಳ ದರ್ಶನ ಪಡೆದರು.

# ವೈಭವದಿಂದ ನಡೆದ ಅಂಬಿನೋತ್ಸವ ಕಾರ್ಯ

» **ಚಳ್ಳಕೆರೆ**

ಪ್ರಸ್ತುತ ವರ್ಷ ನಡೆದ ನವರಾತ್ರಿ ಉತ್ಸವಕ್ಕೆ ವಿಶೇಷ ಕಳೆಬಂದಿದ್ದು, ಈ ಬಾರಿ ತಾಲ್ಲೂಕಿನೆಲ್ಲೆಡೆ ಉತ್ತಮ ಮಳೆಯಾಗಿ ಹಸಿರಿನ ವಾತಾವರವಿದೆ. ಭಕ್ತರು ಸಹ ಉತ್ಸಾಹದಿಂದಲೇ ಬನ್ನಿಮಂಟಪಕ್ಕೆ ಆಗಮಿಸಿ ಗ್ರಾಮದೇವರುಗಳ ಸಮಾಗಮದಲ್ಲಿ ನಡೆದ ಬನ್ನಿಉತ್ಸವಕ್ಕೆ ಸಾಕ್ಷಿಯಾದರು.





ಬನ್ನಿಮಂಟಪಕ್ಕೆ ಗ್ರಾಮ ದೇವರಾದ ಶ್ರೀವೀರಭದ್ರಸ್ವಾಮಿ, ಶ್ರೀಚಳ್ಳಕೆರೆಯಮ್ಮ, ಶ್ರೀಉಡಸಲಮ್ಮ ಆಗಮಿಸಿದ ಕೆಲವೇ ನಿಮಿಷಗಳಲ್ಲಿ ಮಳೆ ಆರಂಭವಾದರೂ ಕದಲದ ಜನ ದೇವರುಗಳಿಗೆ ಜೈಕಾರ ಹಾಕುತ್ತಲೇ ಮಳೆಯಲ್ಲೇ ಬನ್ನಿಮುಡಿಯುವ ಕ್ಷಣಕ್ಕಾಗಿ ಕಾತುರದಿಂದ ಕಾದರು.

ಕಳೆದ ಒಂಭತ್ತು ದಿನಗಳಿಂದ ನವರಾತ್ರಿ ಉತ್ಸವ ಹಿನ್ನೆಲೆಯಲ್ಲಿ ನಗರದ ವಿವಿಧ ದೇವಸ್ಥಾನಗಳಲ್ಲಿ ಪೂಜಾಪುನಸ್ಕಾರಗಳು ಯಶಸ್ವಿಯಾಗಿ ನಡೆದಿದ್ದು, ಶನಿವಾರ ಸಂಜೆ ಸುಮಾರು 5.40ರ ಸಮಯದಲ್ಲಿ ಬಳ್ಳಾರಿ ರಸ್ತೆಯ ಬನ್ನಿಮಂಟಪದ ಮೈದಾನದಲ್ಲಿ ಗ್ರಾಮ ದೇವರಾದ ಶ್ರೀವೀರಭದ್ರಸ್ವಾಮಿ, ಶ್ರೀಚಳ್ಳಕೆರೆಯಮ್ಮ, ಶ್ರೀಉಡಸಲಮ್ಮ ದೇವರುಗಳ ಸಮ್ಮುಖದಲ್ಲಿ ಪುರಂತಪ್ಪನ ವೀರನಾಟ್ಯದೊಂದಿಗೆ ಅಂಬು ಕಡಿಯುವ ಮೂಲಕ ವೈಭವದ ದಸರಾಕ್ಕೆ ತೆರೆ ಎಳೆಯಲಾಯಿತು. ಪ್ರತಿವರ್ಷದಂತೆ ಈ ವರ್ಷವೂ ಬನ್ನಿಮಂಟಪದ ಸುತ್ತ ನಗರದ ವಿವಿಧೆಡೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ನವರಾತ್ರಿ ಉತ್ಸವಕ್ಕೆ ಉತ್ಸಾಹ ತುಂಬಿದರು. ಮೂರು ಗ್ರಾಮ ದೇವರುಗಳು ಮಂಗಳವಾದ್ಯಗಳೊಂದಿಗೆ ಚಳ್ಳಕೆರೆಯಮ್ಮ ದೇವಸ್ಥಾನದ ಸನ್ನಿಧಿಯ ಮೂಲಕ ಮೆರವಣಿಗೆ ಆರಂಭಿಸಿ ಬನ್ನಿಮಂಟಪ ತಲುಪಲಾಯಿತು.

ಪದ್ಧತಿಯಂತೆ ಭವ್ಯವಾದ ಮೆರವಣಿಗೆಯಲ್ಲಿ ಮೊದಲು ಬಸವಣ್ಣ, ಪುರಂತಪ್ಪ, ಚಳ್ಳಕೆರೆಯಮ್ಮ, ಉಡಸಲಮ್ಮ, ವೀರಭದ್ರಸ್ವಾಮಿ ದೇವರಗಳು ಭಕ್ತರ ಜೈಯಕಾರದೊಂದಿಗೆ ಸಾಗಿದವು. ದಾರಿಯುದ್ದಕ್ಕೂ ಜನರು ದೇವರ ದರ್ಶನ ಪಡೆದು ಕೈಮುಗಿದು ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ಪೊಲೀಸರು ದಸರಾ ಹಬ್ಬದ ಹಿನ್ನೆಲೆಯಲ್ಲಿ ದೇವರಗಳ ಮೆರವಣಿಗೆಗೆ ತೊಂದರೆಯಾಗದಂತೆ ಸಂಚಾರವನ್ನು ನಿಯಂತ್ರಿಸಿ ಭಕ್ತರಿಗೆ ಬನ್ನಿಮುಡಿಯುವ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ದಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ,ನಗರಸಭೆ ಅಧ್ಯಕ್ಷೆ ಜೈತುಂಬಿ, ಉಪಾಧ್ಯಕ್ಷೆ ಸುಜಾತಪಾಲಯ್ಯ, ಸದಸ್ಯರಾದ ಬಿ.ಟಿ.ರಮೇಶ್‌ಗೌಡ, ಎಂ.ಜೆ.ರಾಘವೇಂದ್ರ, ಸುಮಭರಮಣ್ಣ, ಶಿವಕುಮಾರ್, ಎಸ್.ಜಯಣ್ಣ, ನಾಮಿನಿ ಸದಸ್ಯ ವೀರಭದ್ರಪ್ಪ, ಕಾಂಗ್ರೆಸ್ ಮುಖಂಡ 'ರಾದ ಟಿ.ರವಿಕುಮಾರ್, ಪ್ರಭುದೇವ್, ಶಶಿಧರ, ಎಚ್.ವಿ.ಪ್ರಸನ್ನಕುಮಾರ್, ಡಾ.ಎಸ್.ಡಿ.ಲೋಕೇಶ್, ಪಿ.ತಿಪ್ಪೇಸ್ವಾಮಿ, ಕೆ.ಎಂ.ಕೊಟ್ರೇಶ್, ಶಿವಕುಮಾರ್, ಕೆ.ಎಂ.ಅರವಿಂದ್, ತರಕಾರಿಮಂಜಣ್ಣ, ಡಿ.ಎಂ.ತಿಪ್ಪೇಸ್ವಾಮಿ, ಪೂಜಾರಾದ ಶಿವಕುಮಾರಸ್ವಾಮಿ, ವೀರೇಶ್ ಮುಂತಾದವರು ಭಾಗವಹಿಸಿದ್ದರು.

# ಗ್ರಾಮ ದೇವರು ಅನುಗ್ರಹದಿಂದ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ: ಶಾಸಕ ಟಿ.ರಘುಮೂರ್ತಿ

» **ಚಳ್ಳಕೆರೆ**

ಕಳೆದ ಹಲವಾರು ವರ್ಷಗಳಿಂದ ಈ ಭಾಗದಜನರಿಗೆ ಎಲ್ಲಾ ರೀತಿಯ ಸುಖ, ಶಾಂತಿ, ನೆಮ್ಮದಿ ಕರುಣಿಸಿ ಅವರ ಜೀವನದಲ್ಲಿ ಯಾವುದೇ ನೋವು ಕೊಡದಂತೆ ಕಾಪಾಡಬೇಕೆಂದು ಗ್ರಾಮ ದೇವರುಗಳಾದ ವೀರಭದ್ರಸ್ವಾಮಿ, ಚಳ್ಳಕೆರೆಯಮ್ಮ, ಉಡಸಲಮ್ಮ ದೇವಿಯನ್ನು ಪ್ರಾರ್ಥಿಸಿರುವುದಾಗಿ ಶಾಸಕ ಟಿ.ರಘುಮೂರ್ತಿ ತಿಳಿಸಿದರು.



ಅವರು, ನಗರದ ಹೊರವಲಯದ ಬಳ್ಳಾರಿ ರಸ್ತೆಯ ಬನ್ನಿಕಟ್ಟೆಬಳಿ ವಿಜಯದಶಮಿ ಸಂದರ್ಭದಲ್ಲಿ ದೇವರದರ್ಶನ ಪಡೆದು ಪೂಜೆಸಲ್ಲಿಸಿ ನೆರೆದಿದ್ದ ಭಕ್ತರನ್ನು ಉದ್ದೇಶಿಸಿ ಮಾತನಾಡಿದರು.

ಈ ಭಾಗದ ಕ್ಷೇತ್ರದ ಶಾಸಕನಾಗಿ ನನಗೆ ಮೂರು ಬಾರಿ ಅವಕಾಶದೊರಕಿದೆ. ಇದಕ್ಕೆ ಗ್ರಾಮ ದೇವರುಗಳ ಶುಭ ಆಶೀರ್ವಾದವಿದೆ. ಪ್ರತಿಯೊಂದು ಹಂತದಲ್ಲೂ ನಾವು ದೇವರು ಮತ್ತು ದೈವತ್ವವನ್ನು ನಂಬಿ ನಡೆಯಬೇಕಾಗುತ್ತದೆ. ನಮ್ಮೆಲ್ಲರ ಬದುಕು ಪರಿಶುದ್ಧತೆಯಿಂದ ಕೂಡಿರಬೇಕಾದರೆ ದೇವರ ಅನುಗ್ರಹ ಅತಿಮುಖ್ಯವಾಗುತ್ತದೆ. ವೈಯಕ್ತಿಕವಾಗಿ ಹೇಳುವುದಾದರೆ ನಮ್ಮೆಲ್ಲರ ಸಾಧನೆ, ಪ್ರಗತಿ ಹಿಂದೆ ದೇವರ ಮತ್ತು ಗುರುಗಳ ಆಶೀರ್ವಾದ ಸದಾನಮ್ಮನ್ನು ಕಾಪಾಡುತ್ತದೆ. ದೇವರ ಮೇಲೆ ಅಚಲವಾದ ನಂಬಿಕೆ, ವಿಶ್ವಾಸವಿಟ್ಟು ನಡೆದರೆ ಮಾತ್ರ ನಮ್ಮ ಬದುಕು ಸಾರ್ಥಕವಾಗಲಿದೆ ಎಂದರು.ಇದೇ ಸಂದರ್ಭದಲ್ಲಿ ದೇವಸ್ಥಾನದ ಧರ್ಮಧರ್ಶಿ ಗೌಡ್ರರಾಮಣ್ಣ, ಪಿ.ತಿಪ್ಪೇಸ್ವಾಮಿ, ದಳವಾಯಿಮೂರ್ತಿ, ಚಿತ್ರಯ್ಯನಹಟ್ಟಿನಾಗರಾಜ, ದೇವಿಪ್ರಸಾದ್, ಶಿವಕುಮಾರಸ್ವಾಮಿ ಮುಂತಾದವರು ಆಡಳಿತಮಂಡಳಿ ಪರವಾಗಿ ಶಾಸಕರನ್ನು ಗೌರವಿಸಿದರು. ಪ್ರತಿವರ್ಷವೂ ಸ್ವಾಮಿಯ ಆಶೀರ್ವಾದದಿಂದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಯಾವುದೇ ವಿಘ್ನವಿಲ್ಲದೆ ನಡೆಯುತ್ತಿದೆ ಎಂದು ಧರ್ಮದರ್ಶಿ ಗೌಡ್ರರಾಮಣ್ಣ ತಿಳಿಸಿದರು.

ನಗರಸಭಾ ಸದಸ್ಯರಾದ ಎಸ್.ಜಯಣ್ಣ, ವೆಂಕಟೇಶ್, ಎಂ.ಜೆ.ರಾಘವೇಂದ್ರ, ಬಿ.ಟಿ.ರಮೇಶ್‌ಗೌಡ, ಅಶ್ವತ್ಥರೆಡ್ಡಿ, ಚಂದ್ರಶೇಖರ್, ಸ್ವಾಮಿ, ಸೋಡಾದಾದಾಪೀರ್, ಕೆ.ಎಂ.ಜಗದೀಶ್, ಹೊಸಮನೆಸ್ವಾಮಿ, ಕೆ.ಎಂ.ಕೋಟ್ರೇಶ್, ಪಾಲಯ್ಯ ಮುಂತಾದವರು ಉಪಸ್ಥಿತರಿದ್ದರು.



**ಚಳ್ಳಕೆರೆ ನಗರದ ನಾಯಕನಹಟ್ಟಿ ರಸ್ತೆಯಲ್ಲಿರುವ ಕರೇಕಲ್ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶಮಿಪೂಜೆ ನೆರವೇರಿಸುವ ಮೂಲಕ ದಸರಾ ಆಚರಿಸಿದರು. ಆರ್ಚಕ ನಾಗಶಯನಗೌತಮ್, ಸಿ.ಎಸ್.ಗೋಪಿನಾಥ ಇತರರು ಪಾಲ್ಗೊಂಡಿದ್ದರು.**



**ಎಸ್.ಜೆ.ಎಂ ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಡಾ.ಬಸವ ಕುಮಾರ ಸ್ವಾಮಿಜಿ ಯವರು ಗೌರವ ಸಮರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಬ್ಯಾಡಗಿಯ ಶ್ರೀ ಮುಪ್ಪಿನಸ್ವಾಮಿ ವಿರಕ್ತ ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಮತ್ತು ಸದ್ಭಕ್ತರು ಹಾಜರಿದ್ದರು.**

# ತಿಮ್ಮಪ್ಪಸ್ವಾಮಿ ದೇವಸ್ಥಾನದಲ್ಲಿ ವಿಜಯದಶಮಿಯ ಸಡಗರ



» **ಚಳ್ಳಕೆರೆ**

ಪ್ರತಿವರ್ಷದಂತೆ ಈ ವರ್ಷವೂ ಹಳೇಟೌನ್‌ನ ಜಗಜೀವನರಾಮ್ ಕಾಲೋನಿಯ ಶ್ರೀತಿಮ್ಮಪ್ಪಸ್ವಾಮಿ ದೇವಸ್ಥಾನದಲ್ಲಿ ವಿಜಯದಶಮಿ ಹಬ್ಬವನ್ನು ಭಕ್ತಿ ಶ್ರದ್ದೆಯಿಂದ ಆಚರಿಸಲಾಯಿತು. ಬೆಳಗಿನಿಂದಲೇ ಶ್ರೀತಿಮ್ಮಪ್ಪಸ್ವಾಮಿಗೆ ಪೂಜಾ ಕಾರ್ಯಕ್ರಮಗಳನ್ನು ಕೈಗೊಂಡು ಸಂಜೆ ಪಲ್ಲಕ್ಕಿ ಉತ್ಸವವನ್ನು ನಗರದ ಪ್ರಮುಖ ರಸ್ತೆಗಳಲ್ಲಿ ನಡೆಸಲಾಯಿತು.

ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಜೆ.ಮಾರಣ್ಣ ಮಾಹಿತಿ ನೀಡಿ, ನಗರದ ಪುರಾತನ ದೇವಸ್ಥಾನಗಳಲ್ಲಿ ತಿಮ್ಮಪ್ಪನ ದೇವಸ್ಥಾನವೂ ಒಂದಾಗಿದೆ. ಪ್ರತಿವರ್ಷವೂ ತಿಮ್ಮಪ್ಪಸ್ವಾಮಿಯೊಂದಿಗೆ ಗೌರಸಮುದ್ರ ಚೌಡೇಶ್ವರಿ ಮತ್ತು ಮಾರಮ್ಮ ದೇವಿ ಉತ್ಸವಮೂರ್ತಿಯನ್ನು ಮೆರವಣಿಗೆ ಮೂಲಕ ಬಿ.ಎಂ ಸರ್ಕಾರಿ ಪ್ರೌಢಶಾಲೆಯ ಮೈದಾನದ ಬನ್ನಿಮಂಟಪಕ್ಕೆ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಕರೆದ್ಯೊಯಲಾಗುವುದು. ಅಲ್ಲಿ ಪೂಜೆಯ ನಂತರ ಅಂಭಿನೋತ್ಸವ ಕಾರ್ಯಕ್ರಮ ನಡೆಸಿ ನೆರೆದಿದ್ದ ಭಕ್ತರಿಗೆ ಬನ್ನಿಯನ್ನು ನೀಡಿ ಶುಭಹಾರೈಸಲಾಗುವುದು. ನಂತರ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯೊಂದಿಗೆ ಪುನಃ ದೇವಸ್ಥಾನಕ್ಕೆ ದೇವರನ್ನು ವಾಪಾಸ್ ಕರೆತರಲಾಗುವುದು.

ಪ್ರಧಾನಕಾರ್ಯದರ್ಶಿ ಟಿ.ಜಯಣ್ಣ ಮಾತನಾಡಿ, ಪಲ್ಲಕ್ಕಿ ಉತ್ಸವದ ಸಂದರ್ಭದಲ್ಲಿ ಅಂಭಿನೋತ್ಸವ ಪೂಜಾ ಕಾರ್ಯಕ್ರಮ ಮುಗಿದ ಕೂಡಲೇ ಶ್ರೀಸ್ವಾಮಿಯ ಮುಕ್ತಿಬಾವುಟವನ್ನು ಹರಾಜು ಮೂಲಕ ಭಕ್ತರಿಗೆ ನೀಡಲಾಗುವುದು. ಒಂದೇ ಮುಕ್ತಿಬಾವುಟವನ್ನು ಡಾ.ಧನಂಜಯಕುಮಾರ್ 10100ಕ್ಕೆ ಪಡೆದರೆ ಎರಡನೇ ಮುಕ್ತಿಬಾವುಟವನ್ನು ಜೆ.ಮೋಹನ್-11001ಕ್ಕೆ ಪಡೆದರು. ಎಚ್‌ಪಿಪಿಸಿ ಸರ್ಕಾರಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಸಿ.ಜಿ.ಜಗನ್ನಾಥ ಒಂದು ಲಕ್ಷ ಮೌಲ್ಯದ ಉತ್ಸವಪಲ್ಲಕ್ಕಿಯನ್ನು ಕೊಡುಗೆಯಾಗಿ ನೀಡಿದ್ದು ಅವರನ್ನು ಆಡಳಿತಮಂಡಳಿ ಪರವಾಗಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಪೂಜಾರಿ ತಿಮ್ಮಯ್ಯ, ಖಜಾಂಚಿ ತಿಮ್ಮಪ್ಪ, ತಿರುಮಲರಾಯಪ್ಪ, ಜೆ.ವೆಂಕಟೇಶ್, ಆರ್.ವೀರಭದ್ರಪ್ಪ, ಪಿ.ಎಂ.ವೀರೇಶ್, ಮನುದೊರೆ ಮುಂತಾದವರು ಉಪಸ್ಥಿತರಿದ್ದರು.

## ಪ್ರಮುಖ ಸುದ್ದಿ

# ಗ್ರಾಮ ದೇವರುಗಳ ದೋಣಿ ಪೂಜೆ, ಅಗ್ನಿಕುಂಡ ಕಾರ್ಯ

» **ಚಳ್ಳಕೆರೆ**

ತಾಲೂಕಿನ ಗೋಪನಹಳ್ಳಿ ಗ್ರಾಮದಲ್ಲಿ ವಿಜಯದಶಮಿ ಹಾಗೂ ಆಯುದ ಪೂಜೆ ಅಂಗವಾಗಿ ಶ್ರೀ ದ್ಯಾಮಲಾಂಭ, ಮೈಲಾರಲಿಂಗೇಶ್ವರ, ಯಲ್ಲಮ್ಮ. ನರಸಿಂಹಸ್ವಾಮಿ, ರಂಗನಾಥಸ್ವಾಮಿ ದೇವರುಗಳು ಹೊಳೆ ಪೂಜೆ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ನಡೆಯಿತು.ಶ್ರೀ ದ್ಯಾಮಲ್ಯಾಂಭ ದೇವಸ್ಥಾನದ ಆವರಣದಲ್ಲಿ ಶನಿವಾರ ರಾತ್ರಿ ಅಗ್ನಿಹೊಂಡ ಹಾಗೂ ಶ್ರೀ ಮೈಲಾರಲಿಂಗೇಶ್ವರಸ್ವಾಮಿ ದೇವಾಸ್ಥಾನದ ಆವರಣದಲ್ಲಿ ಭಾನುವಾರ ಬೆಳಗ್ಗೆ ಗೊರವಗಳ (ದೋಣಿ) ಸೇವೆ ಸಡಗರ ಸಂಭ್ರಮದಿಂದ ಜರುಗಿತು. ತಿಗೊರವ ಸೇವೆಯಲ್ಲಿ ಚಿತ್ರದುರ್ಗ, ಮಾಳಪ್ಪನಹಟ್ಟಿ, ಹಿರೆಮಧುರೆ, ಗಂಜಿಗುಂಟೆ, ,ಕೂಡ್ಲಹಳ್ಳಿ, ಬುಡರಕುಂಟೆ, ಬೇಡರಹಳ್ಳಿ, ಮಠದಹಟ್ಟಿ, ಹಾಗೂ ಗೋಪನಹಳ್ಳಿ ಗ್ರಾಮದ ಸುಮಾರು 40 ಕ್ಕೂ ಹೆಚ್ಚು ಗೊರವಗಳು ಗುರುವಾರ ಗಂಗಾಸ್ನಾನದ ನಂತರ ನಡೆಮುಡಿಯೊಂದಿಗೆ 'ಏಳುಕೋಟಿ ಮೈಲಾರಲಿಂಗೇಶ್ವರ ಚಾಂಗಮಲೋ' ಎನ್ನುತ್ತಾ ದೇವಾಸ್ಥಾನದ ಆವರಣಕ್ಕೆ ಬರುತ್ತಾರೆ. ನಂತರ ಗೊರವರ ದೋಣಿ ಹಾಗೂ ತಾಮ್ರಗಳ ಪಾತ್ರೆಗಳಲ್ಲಿ ಭಕ್ತರು ತಂದ ಬಾಳೆಹಣ್ಣು, ಹಾಲು, ಸಕ್ಕರೆ, ತುಪ್ಪವನ್ನಶ್ರದ್ಧಾ, ಭಕ್ತಿಯಿಂದ ದೋಣಿಗಳಿಗೆ ಹಾಕುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು.ಗೊರವರು ಡಮರುಗಳನ್ನು ಹಿಡಿದು ಭಕ್ತರು ಹಾಕಿದ ಬಾಳೆಹಣ್ಣು, ಹಾಲು, ತುಪ್ಪಗಳ ದೋಣಿಗಳನ್ನು ಸುತ್ತುವ ಮೂಲಕ ಗೊರವಗಳು ಮೈದುಂಬಿ ಭಕ್ತರನ್ನು ಆಶೀರ್ವದಿಸುತ್ತಾರೆ.ನಂತರ ದೋಣಿಗಳಿಗೆ ಪೂಜೆ ಪುರಸ್ಕಾರ ಮುಗಿದ ನಂತರ ಗೊರವಗಳು ದೋಣಿಗಳಿಗೆ ಬಾಯಿ ಹಾಕಿ ಎಂಜಲು ಮಾಡಿದಾಗ ಅವುಗಳನ್ನು ತೆಗೆದು ಭಕ್ತರಿಗೆ ಹಾಗೂ ಗ್ರಾಮದ ಪ್ರತಿ ಮನೆಗಳಿಗೆ ವಿತರಿಸುತ್ತಾರೆ. ಈ ಗೊರವಳ ದೋಣಿ ಸೇವೆ ಪೂರ್ವಜರ ಕಾಲದಿಂದಲೂ ಭಯ, ಭಕ್ತಿ, ಶ್ರದ್ದೆಯಿಂದ ಇಂತ ಜಾನಪದ ಕಲೆಯನ್ನು ಇಂದಿಗೂ ಉಳಿಸಿಕೊಳ್ಳುವ ಮೂಲಕ ದೋಣಿಸೇವೆಯನ್ನು ಆಚರಿಸಿಕೊಳ್ಳುತ್ತಾ ಬರುತ್ತಿದ್ದಾರೆ.ಶ್ರೀ ದ್ಯಾಮಲಾಂಭ ದೇವಾಸ್ಥಾನದ ಆವರಣದಲ್ಲಿ ವಿಜಯದಶಮಿ ಹಾಗೂ ದಸರ ಹಬ್ಬದ ಅಂಗವಾಗಿ ರಾತ್ರಿ 10 ಗಂಟೆಗೆ ಕೆಂಡ ತುಳಿಯುವ ಸೇವೆ ಕಾರ್ಯಕ್ರಮ ಜರುಗಿತು. ದ್ಯಾಮಲ್ಯಾಂಭ ದೇವಿ ಹೊಳೆ ಪೂಜೆ ಮುಗಿಸಿ ಬನ್ನಿ ಮುಡಿದು ದೇವಸ್ಥಾನ ಆವರಣರಕ್ಕೆ ಬಂದ ನಂತರ ಗುಡಿಯ ಸುತ್ತ ಮೂರು ಪ್ರದಕ್ಷಣೆ ಹಾಕಿಸಿದ ನಂತರ ಪೂಜಾರಿ ಮನೆಯಿಂದ ಬಾನವನ್ನು ನಡೆಮುಡಿ ಮೂಲಕ ತಂದು 9 ಎಡೆ ಹಾಗೂ ಬನ್ನಿಮರಕ್ಕೆ ಎಡೆಹಾಕಿ. ಮಡಿವಾಳ ಮೊದಲ ಮೂಜೆ ನಡೆಸಿ ನಂತರ ಪೂಜಾರಿಯ ಮೈಮೇಲೆ ದೇವಿ ಬಂದು ಅಗ್ನಿಹೊಂಡ ಪ್ರವೇಶಮಾಡುತ್ತಾರೆ. ಗುಡಿಗೌಡರಾದ ಎಚ್.ನಿಂಗಪ್ಪ, ಮೈಲಾರಪ್ಪ, ಸತೀಶ್ ಭಾಗವಹಿಸಿದ್ದರು.





ಫಾಸ್ಟ್ ನ್ಯೂಸ್

## ಬಿಚ್ಚು ಭರಮಣ್ಣನಾಯಕ ವಂಶಸ್ಥರಿಂದ ಭಕ್ತಿ ಸಮರ್ಪಣೆ



» **ಚಿತ್ರದುರ್ಗ**

ಜಯದೇವ ಜಗದ್ಗುರುಗಳ 150ನೇ ಜಯಂತ್ಯುತ್ಸವ ಹಾಗೂ ಶರಣಸಂಸ್ಕೃತಿ ಉತ್ಸವ –2024 ನಿಮಿತ್ತ ದಿನಾಂಕ:12.10.2024ರಂದು ಅಪರಾಹ್ನ 4.30ಕ್ಕೆ ಚಿನ್ಮೂಲಾದ್ರಿ ಮೇಲುದುರ್ಗದ ಶ್ರೀಮುರುಘಾಮಠದ ಆವರಣದಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕ ವೇದಿಕೆಯಲ್ಲಿ ಚಿತ್ರದುರ್ಗ ರಾಜವಂಶಸ್ಥರಾದ ಶ್ರೀ ಬಿ.ಎಸ್.ಮದಕರಿ ನಾಯಕ, ಶ್ರೀ ಪರಶುರಾಮನಾಯಕ, ಶ್ರೀ ಪ್ರಸನ್ನ ಕುಮಾರ್, ಶ್ರೀದೇವಿ ಪ್ರಸಾದ್ ಮತ್ತು ಶ್ರೀ ಪಿ.ಕಿರಣ್ ಕುಮಾರ್ ಇವರುಗಳಿಂದ ಶ್ರೀಗಳಿಗೆ ಭಕ್ತಿ ಸಮರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕೊಲ್ಲಾಪುರ ಚಿತ್ರದುರ್ಗಮಠದ ಶ್ರೀ ಶಿವಾನಂದ ಸ್ವಾಮಿಗಳು ಮಾತನಾಡಿ, ಸಾಮಾನ್ಯ ಹುಡುಗನನ್ನು ರಾಜನಾಗಿ ಮಾಡುವ ಶಕ್ತಿ ಗುರುವಿಗೆ ಇತ್ತು ಎಂದು ತೋರಿಸಿದವರು ಮುರಿಗಿ ಶಾಂತವೀರಸ್ವಾಮಿಗಳು ಎಂದು ನುಡಿದರು.ಗುರುಮಠಕಲ್ ಶ್ರೀ ಶಾಂತವೀರಸ್ವಾಮಿಗಳು ಮಾತನಾಡಿ, ಅಲ್ಲಮಪ್ರಭು ಸ್ಥಾಪಿಸಿದ ಶೂನ್ಯಪೀಠ ಶ್ರೀ ಮುರುಘಾ ಮಠಕ್ಕೆ ತನ್ನದೇ ಆದ ಚಾರಿತ್ರಿಕ ಪರಂಪರೆಯಿದೆ. ಗುರುಗಳಿಗೆ ಭರಮಣ್ಣನಾಯಕ ವಂಶಸ್ಥರು ಭಕ್ತ ಸಮರ್ಪಣೆ ಮಾಡುವುದು ವಿಶೇಷವಾಗಿದೆ. ಬಿಚ್ಚು ಭರಮಣ್ಣನಾಯಕರು ನಿತ್ಯವು ಗುರುಗಳ ಪೂಜೆ ವ್ಯವಸ್ಥೆಯನ್ನು ಮಾಡಲು 365 ಅಂಕಣಗಳ ಮಠವನ್ನು ಕಟ್ಟಿಸಿಕೊಡುತ್ತಾರೆ. ಅದೇ ಮೇಲು ದುರ್ಗದ ಮೂಲ ಮಠವಾಗಿದೆ ಎಂದು ತಿಳಿಸಿದರು. ಎಸ್.ಜೆ.ಎಂ.ವಿದ್ಯಾಪೀಠದ ಆಡಳಿತಮಂಡಳಿ ಸದಸ್ಯರಾದಎಸ್.ಎನ್.ಚಂದ್ರಶೇಖರ್ಮಾತನಾಡಿ, ಇಂತಹ ಆಧುನಿಕ ನಾಗರಿಕ ಜಗತ್ತಿನಲ್ಲಿ ಇಂದಿಗೂ ಗುರು ಪರಂಪರೆ ಮುಂದುವರೆದುಕೊಂಡು ಬಂದಿರುವುದು ಸ್ವಾಗತಾರ್ಹ. ಈ ಪರಂಪರೆಯು ಹೀಗೆ ಮುಂದುವರೆಯಲಿ ಎಂದು ತಿಳಿಸಿದರು. ಬಿಚ್ಚು ಭರಮಣ್ಣನಾಯಕರ ವಂಶಸ್ಥರು ಶ್ರೀ. ಜಯದೇವ ಮುರುಘರಾಜೇಂದ್ರ ಸ್ವಾಮಿಗಳ ಬೆಳ್ಳಿ ವಿಗ್ರಹಕ್ಕೆ ಭಕ್ತಿ ಸಮರ್ಪಣೆ ಮಾಡಿದರು. ಭಕ್ತಿ ಸಮರ್ಪಣೆ ಮಾಡಿ ಮಾತನಾಡಿದ ರಾಜವಂಶಸ್ಥ ಪ್ರಸನ್ನಕುಮಾರ್, ಗುರುಮನೆ ಹಾಗೂ ಅರಮನೆ ಇರವಂತ ಪಾರಂಪರಿಕ ನಡೆಯನ್ನು ಈ ಭಕ್ತಿ ಸಮರ್ಪಣೆ ತಿಳಿಸಿಕೊಡುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್.ಜೆ.ಎಂ.ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಡಾ. ಶ್ರೀ. ಬಸವಕುಮಾರ ಸ್ವಾಮಿಗಳು, ಆಡಳಿತಮಂಡಳಿ ಸದಸ್ಯರಾದ ಎಸ್.ಎನ್. ಚಂದ್ರಶೇಖರ್, ಶ್ರೀ ಮಾದಾರ ಚೆನ್ನಯ್ಯ ಸ್ವಾಮಿಗಳು, ಡಾ.ಬಸವಪ್ರಭು ಸ್ವಾಮಿಗಳು, ಡಾ.ಬಸವ ರಮಾನಂದಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ರಾವಂದೂರಿನ ಶ್ರೀ.ಮೋಕ್ಷಪತಿ ಸ್ವಾಮಿಗಳು, ಶ್ರೀ.ಸಿದ್ದಬಸವ ಸ್ವಾಮಿಗಳು, ರಾಜವಂಶಸ್ಥರಾದ ಶ್ರೀ ಬಿ.ಎಸ್. ಮದಕರಿ ನಾಯಕ, ಶ್ರೀ ಪರಶುರಾಮನಾಯಕ, ಮತ್ತು ಶ್ರೀ ಪಿ.ಕಿರಣ್ ಕುಮಾರ್, ಹರಚರ ಗುರುಮೂರ್ತಿಗಳು ಉಪಸ್ಥಿತರಿದ್ದರು.

## ಮೆಂಗಸಂದ್ರ ಲಕ್ಷ್ಮೀರಂಗನಾಥಸ್ವಾಮಿ ಅಂಬಿನೋತ್ಸವ



» **ಹೊಸದುರ್ಗ**

ಹೊಸದುರ್ಗ ತಾಲೂಕಿನ ಶ್ರೀರಾಂಪುರ ಹೋಬಳಿ ಮೆಂಗಸಂದ್ರ(ಕೆಳಗಲಹಟ್ಟಿ )ಗ್ರಾಮದಲ್ಲಿ ನೆಲೆಸಿ ಸರ್ಜನ್ ಡಾಕ್ಟರ್ ಎಂದೇ ಹೆಸರುವಾಸಿ ಯಾಗಿರುವ ಈ ಭಾಗದ ಕಾಡುಗೊಲ್ಲರ ಆರಾಧ್ಯದೈವ ಶ್ರೀ ಲಕ್ಷ್ಮೀರಂಗನಾಥಸ್ವಾಮಿ ಅಂಬಿನೋತ್ಸವ ಕಾರ್ಯಕ್ರಮ ಭಕ್ತರ ಸಮ್ಮುಖದಲ್ಲಿ ವೈಭವದಿಂದ ಭಾನುವಾರ ಜರುಗಿತು. ರಂಗನಾಥಸ್ವಾಮಿ ಜೊತೆಗೆ ಗ್ರಾಮದೇವತೆ ಬೇವಿನಹಳ್ಳಿ ಕರಿಯಮ್ಮದೇವಿ, ಹೊಟ್ಟೆಪ್ಪನಹಟ್ಟಿ ಕರಿಯಮ್ಮ ದೇವಿ, ಶ್ರೀ ವೀರ ಜೋಗಣ್ಣ ಸ್ವಾಮಿ, ಶ್ರೀ ವೀರಬಿಳಿಯಪ್ಪಸ್ವಾಮಿ ಪಾಲ್ಗೊಂಡಿದ್ದವು. ಶ್ರೀ ಲಕ್ಷ್ಮಿರಂಗನಾಥಸ್ವಾಮಿ ಲಕ್ಷಾಂತರ ಭಕ್ತರ ದಂಡನ್ನು ತನ್ನತ್ತ ಆಕರ್ಷಿಸುತ್ತಿದೆ. ರಾಜ್ಯದ ಮೂಲೆ, ಮೂಲೆಗಳಿಂದ ಬರುವ ಯಾವುದೇ ವ್ಯಕ್ತಿಗೆ ಆಗಲಿ, ಜಾನುವಾರುಗಳಿಗೆ ಆಗಲಿ ಹಾವು, ಕಚ್ಚಿದರೆ, ಕಜ್ಜಿ, ಇಸುಬು, ಮಂಡಿನೋವು ಸೆಳೆತ ಹೀಗೆ ಹಲವಾರು ಕಾಯಿಲೆಗಳಿಗೆ ದೂಳತ ರೂಪದಲ್ಲಿ ಪೂಜಾರಪ್ಪರ ಕೈಯಿಂದ ಕೆಲಸ ನೆರವೇರಿಸಿದಾಗ ಎಲ್ಲಾ ತರಹದ ಕಾಯಿಲೆಗಳಿಂದ ಗುಣಮುಖರಾಗುತ್ತಾರೆ.

# ಮಳೆಯ ಆರ್ಭಟ: ಜನಜೀವನ ತತ್ತರ

» **ಚಳ್ಳಕೆರೆ**

ತಾಲ್ಲೂಕಿನಾದ್ಯಂತ ಶುಕ್ರವಾರ, ಶನಿವಾರ ಸುರಿದ ಮಳೆಗೆ ಜನರು, ವ್ಯಾಪಾರಸ್ಥರು, ರೈತರು ತತ್ತರಿಸಿದ್ದಾರೆ. ದಸರಾ ಹಬ್ಬದ ಆಯುಧ ಪೂಜೆ ಖುಷಿಯಲ್ಲಿದ್ದ ವ್ಯಾಪಾರಸ್ಥರಿಗೆ ವರುಣರಾಯ ಬಿಗ್ ಶಾಕ್ ನೀಡಿದಂತು ಸತ್ಯ.

ನಗರದ ಬೆಂಗಳೂರು ರಸ್ತೆಯ ಸುಮಾರು ಹತ್ತುಹೆಚ್ಚು ಬಟ್ಟೆ ಅಂಗಡಿ, ಕೋರಿಯರ್ ಸೆಂಟರ್, ಗೊಬ್ಬರ ಅಂಗಡಿ, ದಿನಸಿ, ಕ್ಲಿನಿಕ್ ಗಳಿಗೆ ಶುಕ್ರವಾರ ರಾತ್ರಿ ಸುರಿದ ಮಳೆ ಕೆಳಮಳಿಗೆಗಳಿಗೆ ನುಗ್ಗಿದ ಪರಿಣಾಮ ಅಂಗಡಿಯಲ್ಲಿದ್ದ ಎಲ್ಲಾ ವಸ್ತುಗಳು ನೀರಿನಲ್ಲಿ ಮುಳುಗಿಹೋಗಿದ್ದವು. ಹಬ್ಬದ ದಿನವೂ ವ್ಯಾಪಾರವಹಿವಾಟು ಇಲ್ಲದೆ ದಿನವಿಡಿ ಅಂಗಡಿಯಲ್ಲಿ ತುಂಬಿದ್ದ ನೀರು ಹೋರಹಾಕಿದರು. ಶುಕ್ರವಾರ ರಾತ್ರಿ ಇಡೀ ಅಂಗಡಿ ಮಾಲೀಕರೊಂದಿಗೆ ಅಗ್ನಿಶಾಮಕ ಸಿಬ್ಬಂದಿ ಅಂಗಡಿಯಲ್ಲಿ ತುಂಬಿದ್ದ ನೀರನ್ನು ಮೋಟರ್ ಸಹಾಯದಿಂದ ಹೊರಹಾಕಿದರು. ಇದಲ್ಲದೆ ಮೈರಾಡ ಕಾಲೋನಿ, ಅಭಿಷೇಕ್ ನಗರ, ಶಾಂತಿನಗರ, ರಹೀಂನಗರದ ಸುಮಾರು 50ಕ್ಕೂಹೆಚ್ಚು ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನು ನೀರಿನಲ್ಲಿ ಮುಳುಗಿದ್ದವು. ಮನೆಯೊಳಗೆ ನುಗ್ಗಿದ ಮಳೆನೀರನ್ನು ಇಡೀರಾತ್ರಿ ಹೊರಹಾಕಿದ್ದು ಕಂಡುಬಂತು. ಮೈರಾಡ ಕಾಲೋನಿ ನಿವಾಸಿಗಳು ಪ್ರತಿಮಳೆಗೂ ನಮಗೆ ಇದೇ ಸ್ಥಿತಿ ಉಂಟಾಗುತ್ತಿದೆ ಶಾಶ್ವತ ಪರಿಹಾರ ತೋರಿಸಿ ಎಂದು ಮನವಿ ಮಾಡಿದರು. ನಗರದ ಮಾತ್ರವಲ್ಲದೆ ಗ್ರಾಮೀಣ ಭಾಗದ ಜಮೀನುಗಳಿಗೆ ನೀರು ನುಗ್ಗಿ ಕೈಗೆ ಬಂದಿದ್ದ ಫಸಲು ನೀರುಪಾಲಾಗಿ ಲಕ್ಷಾಂತರ ರೂ ನಷ್ಟ ಸಂಭವಿಸಿದೆ. ತಾಲ್ಲೂಕಿನ ನಗರಂಗೆರೆ, ರೇಖಲಗೆರೆ, ಎನ್.ದೇವರಹಳ್ಳಿ ಕೆರೆಗಳು ಕೋಡಿಬಿದ್ದು ರೈತರಲ್ಲಿ ಸಂತಸ ಮನೆ ಮಾಡಿದೆ. ಹಲವಾರು ವರ್ಷಗಳಿಂದ ನೀರೇ ಕಾಣದ ಕೆರೆಕಟ್ಟೆಗಳು ಈ ಬಾರಿಯ ಮಳೆಗೆ ತುಂಬಿ ಜಲಕಳೆತಂದುಕೊಂಡಿವೆ.



ಶುಕ್ರವಾರ ಬೆಳಗಿನ ಜಾವ ನಾಯಕನಹಟ್ಟಿ–90.06, ಚಳ್ಳಕೆರೆ–88.04, ದೇವರಮರಿಕುಂಟೆ–38.08, ಪರಶುರಾಮಪುರ–37.08, ತಳಕು–37.04 ಒಟ್ಟು 291.10 ಎಂ.ಎಂ ಮಳೆಯಾಗಿದೆ. ತಾಲ್ಲೂಕಿನ ನಗರಂಗೆರೆ ಪಂಚಾಯಿತಿ ವ್ಯಾಪ್ತಿಯ ದಾಸನಾಯಕಹಟ್ಟಿಯಲ್ಲಿ ತಿಪ್ಪೇಸ್ವಾಮಿ ಎಂಬುವವರಿಗೆ ಸೇರಿದ ರಿ.ಸರ್ವೆ, ನಂ. 54/2ರಲ್ಲಿದ್ದ ಶೇಂಗಾ ಬೆಳೆ ಸಂಪೂರ್ಣ ನೀರಿನಲ್ಲಿ ಮುಳುಗಿ ಸುಮಾರು 50 ಸಾವಿರ ನಷ್ಟ ಸಂಭವಿಸಿದೆ. ವರವು ಗ್ರಾಮದ ಕನ್ನಯ್ಯ ಎಂಬುವವರ ಜಮೀನಿನಲ್ಲಿದ್ದ ಮೂರು ಎಕರೆ ಮೆಕ್ಕೆಜೋಳ ನೀರಿನಲ್ಲಿ ಮುಳುಗಿದೆ. ವರವು ಗ್ರಾಮದ ಪಾಲಯ್ಯ ಮತ್ತು ಸಣ್ಣಬೋರಮ್ಮ ಎಂಬುವವರ ರಿ.ಸರ್ವೆ, ನಂ. 63/10ರಲ್ಲಿದ್ದ ಟಮೋಟೊ ಬೆಳೆ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ಬಂಜಿಗೆರೆ ಗ್ರಾಮದ ಬಸಮ್ಮ ಎಂಬುವವರ ವಾಸದ ಮನೆಯ ಮೇಲ್ಛಾವಣಿ ಕುಸಿದು 35 ಸಾವಿರ ನಷ್ಟ ಸಂಭವಿಸಿದೆ. ನೀರು ನುಗ್ಗಿದ ಪ್ರದೇಶಗಳಿಗೆ ತಹಶೀಲ್ದಾರ್ ರೇಹಾನ್‌ಪಾಷ ತಮ್ಮ ಸಿಬ್ಬಂದಿಯೊಂದಿಗೆ ತೆರಳಿ ಪರಿಶೀಲನೆ ನಡೆಸಿದರು.











## ಹಾರನಕಣಿವೆ ರಂಗನಾಥಸ್ವಾಮಿ ಅಂಬಿನೋತ್ಸವ

» **ಹೊಸದುರ್ಗ**

ತಾಲ್ಲೂಕಿನ ಗಡಿ ಭಾಗದಲ್ಲಿರುವ ಪುಣ್ಯ ಕ್ಷೇತ್ರವಾದ ಹಾರನಕಣಿವೆಯ ಶ್ರೀ ರಂಗನಾಥಸ್ವಾಮಿಯ ಅಂಬಿನೋತ್ಸವವು ಶನಿವಾರ ಅತ್ಯಂತ ವೈಭವಯುತವಾಗಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಚಿತ್ರದುರ್ಗ ಜಿಲ್ಲೆಯ ಅವಳಿ ತಾಲ್ಲೂಕುಗಳಾದ ಹಿರಿಯೂರು ಹೊಸದುರ್ಗ ಅಲ್ಲದೆ ನಾಡಿನ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಮುಂಜಾನೆಯಿಂದ ಹಿಡಿದು ಕತ್ತಲಾಗುವವರೆಗೂ ಸ್ವಾಮಿಯ ಉತ್ಸವವನ್ನ ನೋಡುತ್ತಾ ಜಾತ್ರೆಯಲ್ಲಿ ತಿರುಗಾಡುತ್ತಾ ಕಾಲಕಳೆಯುತ್ತಿದ್ದರೆ ಮತ್ತಷ್ಟು ಮಂದಿ ಸಮೀಪದಲ್ಲೆ ಇರುವ ವಾಣಿವಿಲಾಸ ಜಲಾಶಯ ನೋಡಲು ದೌಡಾಯಿಸಿದರು.

ನಾಡಿನ ಹಲವಾರು ಕಡೆಗಳಲ್ಲಿ ಶ್ರೀ ರಂಗನಾಥಸ್ವಾಮಿಯ ಭಕ್ತರು ಇದ್ದು ಅಂಬಿನೋತ್ಸವಕ್ಕೆ ಕಾರು.ಬೈಕ್ ಬಸ್ ಮತ್ತಿತರೆ ವಾಹನಗಳಲ್ಲಿ ಬಂದು ಸ್ವಾಮಿಯ ದರ್ಶನಪಡೆದು ತಮ್ಮ ಭಕ್ತಯನ್ನ ಸಮರ್ಪಿಸಿದರು.ಹಾವುಚೇಳು ಸಮರ್ಪಣೆ: ಸ್ವಾಮಿಯ ಸನ್ನಿದಿಗೆ ಬಂದಿದ್ದ ಭಕ್ತ ಸಮೂಹ ಮಂಗಳಾರತಿ ಮಾಡಿಸಿದ ನಂತರ ಅಲ್ಲಿಯ ವ್ಯಾಪಾರಸ್ತರಿಂದ ಖರೀದಿಸಿದ ಪಂಚಲೋಹದ ಹಾವು–ಚೇಳುಗಳನ್ನ ಹರಕೆಯ ರೂಪದಲ್ಲಿ ಸ್ವಾಮಿಗೆ ಒಪ್ಪಿಸಿದರು.ಈ ರೀತಿ ಹರಕೆ ಒಪ್ಪಿಸುವುದರಿಂದ ಸ್ವಾಮಿಯನ್ನು ಮನೆ ದೇವರೆಂದು ಮತ್ತು ವಿವಿಧ ವಿಷಜಂತುಗಳ ಕಾಟವನ್ನ ತಪ್ಪಿಸೆಂದು ಹೆರಕೆ ಹೋತ್ತು ಒಪ್ಪಿಸಲಾಗುವದು ಇದರಿಂದನಮ್ಮಕುಟುಂಬದಲ್ಲಿ ಬರುವ ಕಷ್ಟಗಳು ನೀಗುತ್ತವೆ ಎಂಬ ನಂಬಿಕೆ ಇದೆ ಎನ್ನುತ್ತಾರೆ ಸಾಕಷ್ಟು ಮಂದಿ ಭಕ್ತರು.

ಶ್ರೀರಂಗನಾಥಸ್ವಾಮಿ ಭಕ್ತರ ಕೋರಿಕೆಯನ್ನ ಹರಸಿ ಅವರ ಜೀವನದಲ್ಲಿ ನೆಮ್ಮದಿ ನೀಡುವ ದೇವರೆಂದು ಪ್ರಸಿದ್ಧಿಪಡೆದಿದೆ ಮನೆಯಲ್ಲಿ ಹಾವು ಚೇಳು ಅಥವಾ ಯಾವುದೇ ವಿಷ ಜಂತುಗಳು ಕಾಣಿಸಿಕೊಂಡರೂ ನಂಬಿದ ದೇವರಾದ ಶ್ರೀ ರಂಗನಾಥ ಸ್ವಾಮಿಯ ದೇವಾಲಯಕ್ಕೆ ಹೋಗಿ ಪಂಚಲೋಹದ ಹಾವು–ಚೇಳುಗಳನ್ನು ಖರೀಸಿದಿ ಸ್ವಾಮಿಗೆ ಅರ್ಪಿಸಿ ಬರುತ್ತಾರೆ ಈ ಪದ್ಧತಿ ಕೇವಲ ಜಾತ್ರೆಗೆ ಸೀಮಿತವಾಗದೆ ಪ್ರತಿ ಶನಿವಾರ ದಿನ ಪೂಜಾ ಸಮಯದಲ್ಲಿ ಅರ್ಪಿಸಿ ಬರುವ ಪದ್ಧತಿ ಇದೆ.ಅಂಬಿನೋತ್ಸವದ ಪ್ರಯುಕ್ತ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು ಉತ್ಸವ ಮೂರ್ತಿಯ ಪೂಜೆ ಮತ್ತು ಬನ್ನಿ ಮರದ ಬಳಿ ಅಂಬಿನೋತ್ಸವ ಸಡಗರ ಹಾಗೂ ಸಂಭ್ರಮದಿಂದ ನೆರವೇರಿತು.



ಪ್ರಮುಖ ಸುದ್ದಿ

# ಹೊಸದುರ್ಗದಲ್ಲಿ ವೈಭವಯುತವಾಗಿ ನಡೆದ ಅಂಬಿನೋತ್ಸವ

» **ಹೊಸದುರ್ಗ**

ಪಟ್ಟಣದ ಹುಳಿಯಾರು ರಸ್ತೆಯಲ್ಲಿರುವ ಬನ್ನಿಮರದ ಮಂಟಪದ ವಿಶಾಲವಾದ ಆವರಣದಲ್ಲಿ ಶನಿವಾರ ಸಂಜೆ ಅತ್ಯಂತ ವೈಭವಯುತವಾದ ಅಂಬಿನೋತ್ಸವ ನಡೆಯಿತು.

ಸಂಜೆ 6.15 ರ ಸುಮಾರಿನಲ್ಲಿ ಪಟ್ಟಣದ ಪ್ರಮುಖದೇವತಗಳಾದಶ್ರೀದುರ್ಗಾಂಬಿಕಾ ದೇವಿ.ಶ್ರೀ ಬನಶಂಕರಿದೇವಿ.ಶ್ರೀ ಪ್ಲೇಗದಮ್ಮ.ಶ್ರೀ ಅಂತರಗಟ್ಟೆಮ್ಮ,ಕಾಳಮ್ಮ ಸೇರಿದಂತೆ ಒಟ್ಟು 9 ದೇವರುಗಳು ಪಟ್ಟಣದ ಪ್ರಟ್ಟಣದ ಪ್ರಮುಖ ರಾಜಬೀದಿಗಳಲ್ಲಿ ಮೆರವಣೀಗೆ ಹೋರಟು ಬನ್ನಿ ಮಂಟಪವನ್ನ ಸೇರಿದವು.

ಬನ್ನಿ ಮಂಟಪದ ಅವರಣದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ದೇವರುಗಳಿಗೆಹಾಗೂಬನ್ನಿಮಂಟಪದಲ್ಲಿನ ಅವರಣದಲ್ಲಿದ್ದ ದೇವರುಗಳಿಗೆರ ಪೂಜೆ ಸಲ್ಲಿಸಿ ನಂತರ ನೆರೆದಿದ್ದ ಭಕ್ತ ಸಮೂಹಕ್ಕೆ ಸ್ನೇಹಿತ ಬಳಗಕ್ಕೆ ಮತ್ತು ಆತ್ಮೀಯರಿಗೆ ಪರಸ್ಪರ ಬನ್ನಿಪತ್ರೆಯನ್ನ ಆತ್ಮೀಯತೆಯಿಂದ ವಿನಿಮಯ ಮಾಡಿಕೊಂಡರು.





ಬನ್ನಿ ಪೂಜೆ ಮುಗಿದ ಕ್ಷಣಾರ್ಧದಲ್ಲೆ ನೆರೆದಿದ್ದ ಜನರು ಬನ್ನಿ ಪತ್ರೆ ಹಾಗೂ ಬಾಳೆ ಪತ್ರೆಯನ್ನ ತೆಗೆದುಕೊಳ್ಳಲು ಮುಗಿ ಬಿದ್ದರು. ಗ್ರಾಮದ 9 ದೇವರುಗಳ ಪೂಜಾರಿಗಳು ಮುಖಂಡರು ಜನಪ್ರತಿನಿಧಿಗಳು ಗೌಡರು ಪ್ರಮುಖರು ಪೂಜೆಯಲ್ಲಿ ಪಾಲ್ಗೊಂಡು ಬನ್ನಿ ಕಾರ್ಯಕ್ರಮವನ್ನ ಯಶಸ್ವಿಗೊಳಿಸಿದರು.

ಇದೇ ಸಂಧರ್ಬದಲ್ಲಿ ತಹಶಿಲ್ದಾರ್ ತಿರುಪತಿಪಾಟೀಲ್ ಅವರು ಬನ್ನಿ ಮಂಟಪದ ಅವರಣದ ಸುತ್ತ ಬಿಲ್ಲಿನ ಬಾಣ ಬಿಡುವ ಮೂಲಕ ಅಂಬಿನೋತ್ಸವ ಸಡಗರ ಸಂಭ್ರಮದಿಂದ ಜರುಗಿತು. ಶಾಸಕ ಬಿ.ಜಿ.ಗೋವಿಂದಪ್ಪ ಪುರಸಭಾ ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ ಪುರಸಭಾ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿಆನಂದ್ ಸರ್ವ ಸದಸ್ಯರುಗಳು ಸೇರಿದಂತೆ ಪುರಸಭಾ ಸಿಬ್ಬಂಧಿ ವರ್ಗ ಹಾಗೂ ಪಟ್ಟಣದ ಪ್ರಮುಖ ಜನಪ್ರತಿನಿಧಿಗಳು ಮುಖಂಡರುಗಳು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಹಾಲಯ ಅಮವಾಸ್ಯೆಯಿಂದ ಒಂಬತ್ತು ದಿವಸಗಳ ಕಾಲ ಪ್ರಮುಖ ದೇವಾಲಯಗಳಲ್ಲ ದೇವಿ ಪುರಾಣ ಹರಿಕಥೆ.ಶನಿಪುರಾಣ ದೇವ್ರೊಇ ಮಹತ್ಮೆ,ಮತ್ತು ಭಜನೆ ವಿಶೇಷ ಪೂಜಾಕಾರ್ಯಕ್ರಮಗಳು ಶ್ರದ್ಧಾ ಪೂರ್ವಕವಾಗಿ ಜರುಗಿದವು.

ಅದೇ ರೀತಿ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಬಾಗೂರು. ನೀರಗುಂದ, ದೇವಪುರ, ಮತ್ತೋಡು ಶ್ರೀರಾಂಪುರ, ಎಸ್.ನೇರಲಕೆರೆ, ಬೆಲಗೂರು.ತೇಕಲವಟ್ಟಿ. ಜಾನಕಲ್ಲು, ಮಾಡದಕೆರೆ, ಬಳ್ಳೆಕರೆ ಬುರುಡೇಕಟ್ಟೆ ಮಳಲಿ ಮೈಲಾರಪುರ ಗವಿರಂಗಾಪುರ ಮುಂತಾದ ಗ್ರಾಮಗಳಲ್ಲಿಯೂ ಅಂಬಿನೋತ್ಸವ ಜರುಗಿತು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T